ಹೇಳಿದ್ದಾರೆ. ಇಂತಹ ಒಂದು ದೊಡ್ಡ ಹಗರಣದಲ್ಲಿ ನಮ್ಮ ಬೆಂಗಳೂರು ಕೂಡ ಹಿಂದುಳಿದಿಲ್ಲ. ಬೆಂಗಳೂರಿನಲ್ಲಿರತಕ್ಕಂಥ ಫೇರ್ ಗ್ರೋಥ್ ಫೈನಾನ್ಸಿಯಲ್ ಸರ್ವೀಸಸ್ ಎನ್ನತಕ್ಕಂಥ ಕಂಪೆನಿಯಲ್ಲೂ ಸಹ ಸಾವಿರಾರು ರೂಪಾಯಿಗಳ ದುರ್ವ್ಯವಹಾರ ನಡೆದಿದೆ.

ಉಪಾಧ್ಯಕ್ಷಿಣಿಯವರು : ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿರತಕ್ಕಂಥ ವಿಚಾರ.

ಶ್ರೀ ಸಿ. ಬೈರೇಗೌಡ : ಇದರಲ್ಲಿ ರಾಜ್ಯ ಸರ್ಕಾರದ ಸಂಬಂಧ ಯಾವ ರೀತಿ ಇದೆ ಎನ್ನತಕ್ಕಂಥಾದ್ದನ್ನು ನಾನು ಹೇಳುತ್ತೇನೆ. ಇದರ ಬಗ್ಗೆ ಸಿಬಿಐ ವಿಚಾರಣೆ ನಡೆದಿದೆ. ನಾನು ಅದನ್ನು ಪ್ರಸ್ತಾಪ ಮಾಡುತ್ತಿಲ್ಲ. ಈಗ ಕೇಂದ್ರದಲ್ಲಿ, ಪ್ರಧಾನ ಮಂತ್ರಿಗಳಾಗಿರತಕ್ಕಂಥವರು ಏನು ಹೇಳಿದ್ದಾರೆಂದರೆ, ಕೇಂದ್ರ ಸರ್ಕಾರದಲ್ಲಿರತಕ್ಕಂಥ ಮಂತ್ರಿಗಳು ಯಾರಾದರು ಇಂತಹ ಕಂಪೆನಿಗಳಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡಿದ್ದರೆ ಅವರು ತಿಳಿಸಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.

ಉಪಾಧ್ಯಕ್ಷಿಣಿಯವರು : ಈಗ ಅಜೆಂಡಾ ಪ್ರಕಾರ ಹೋಗೋಣ. ಏಕೆಂದರೆ, ಇನ್ನು ಹಲವಾರು ವಿಷಯಗಳಿರುವುದರಿಂದ ಮೊದಲು ಅವುಗಳನ್ನು ಮುಗಿಸಬೇಕಾಗುತ್ತದೆ. ಆನಂತರ, ಇದನ್ನು ಮತ್ತೆ ನೋಡಿ ತೆಗೆದುಕೊಳ್ಳೋಣ.

ಶ್ರೀ ಸಿ. ಬೈರೇಗೌಡ : ಇದರ ಬಗ್ಗೆ ಸ್ವಲ್ಪವೇ ಹೇಳಿ ನಾನು ಮುಗಿಸಿಬಿಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಬೈರೇಗೌಡರೇ, ನಾನು ಇಂಟರ್‌ವಿನ್ ಮಾಡುತ್ತಿದ್ದೇನೆ. ಈ ಸೆಕ್ಯೂರಿಟಿ ಸ್ಕ್ಯಾಮ್ ಏನಿದೆ, ಇದೆಲ್ಲಾ ನಮಗೆ ಸಂಬಂಧಪಡುವುದಿಲ್ಲ.

ಶ್ರೀ ಸಿ. ಬೈರೇಗೌಡ : ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ. ಹಾಲು ಉತ್ಪಾದಕರು ರಾಜ್ಯಾದ್ಯಂತ ಇದ್ದಾರೆ. ಈ ವಿಷಯವಾಗಿ ತಾವು ಹೇಳಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

ಉಪಾಧ್ಯಕ್ಷಿಣಿಯವರು : ಈಗ ವಿತ್ತೀಯ ಕಾರ್ಯಕಲಾಪಗಳನ್ನು ಮೊದಲು ಮುಗಿಸೋಣ. ಏಕೆಂದರೆ, ಇದು ಮೇಲ್ಮನೆಗೆ ಹೋಗಬೇಕಾಗುತ್ತದೆ. ಆ ವಿಷಯವನ್ನು ನಂತರ ತೆಗೆದುಕೊಳ್ಳೋಣ.

ವಿತೀಯ ಕಾರ್ಯಕಲಾಪಗಳು

1992–1993ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಬೇಡಿಕೆಗಳ ಬಗ್ಗೆ ಚರ್ಚೆ

+ ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) ಹೌದು ಈಗ ಮನೆಯಲ್ಲಿ ಪಾಸಾದ ನಂತರ, ಆ ಮನೆಗೆ ಮತ್ತೆ ಹೋಗಿ ಪಾಸಾಗಬೇಕು. ಇದು ಪಾಸಾಗಿ ಬರಲಿ ಎಂದು ಅಲ್ಲಿ ಕೂಡ ಕಾಯುತ್ತಿದ್ದಾರೆ. ನಾನು ಅಲ್ಲಿಗೆ ಬಂದೆ. ಈ ವಿಷಯ ಮುಗಿದ ನಂತರ ನಿಮ್ಮ ಬೇರೆ ವಿಷಯ ಏನಿದೆ. ಆಗ ಉಪಾಧ್ಯಕ್ಷಿಣಿಯವರು ಅನುಮತಿ ಕೊಡುತ್ತಾರೆ, ಆಗ ತಾವು ಪ್ರಸ್ತಾಪ ಮಾಡಬಹುದು. ಯಾರೂ ಬೇಡ ಎಂದು ಹೇಳುವುದಿಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೇ, ತಮ್ಮ ಗಮನಕ್ಕೆ ತರತಕ್ಕಂಥಾದ್ದು ಏನೆಂದರೆ, ದಯಮಾಡಿ ತಾವು ರೆಕಾರ್ಡ್ ತರಿಸಿ ನೋಡಿ. ಈ ಬಿಲ್ ಈ ಸದನದಲ್ಲಿ ಇನ್ನೂ ಇಂಟ್ರಡ್ಯೂಸ್ ಆಗಿಲ್ಲ. ಏನಾಗಿದೆಯೆಂದು ತಿಳಿದುಕೊಳ್ಳುವುದಕ್ಕೆ ರೆಕಾರ್ಡ್ ತೆಗೆದು ನೋಡಿ. ಮುಖ್ಯಮಂತ್ರಿಗಳು ಇದನ್ನು ಮಂಡಿಸಿಲ್ಲ. ಬೇಕಾದರೆ ತಾವು ರೆಕಾರ್ಡ್ ತೆಗೆದು ನೋಡಿ, ಆಗ ಗೊತ್ತಾಗುತ್ತದೆ. ನಾವು ಅದನ್ನು ಬಹಳ ಕ್ಲೀನಾಗಿ ಅಬ್ಸರ್ವ್ ಮಾಡುತ್ತಿದ್ದೇವೆ. ಕಾನೂನು ರೀತ್ಯ ಇದು ಇನ್ನೂ ಮಂಡನೆಯಾಗಿಲ್ಲ. ಈಗ ನಮ್ಮ ಕೈಗೆ ಕೊಟ್ಟಿದ್ದು; ಇದರ ಪರವಾಗಿ ನೀವು ಕೈ ಎತ್ತಿ ಎಂದರೆ ಇದು ಸಾಧ್ಯವಿಲ್ಲದಿರತಕ್ಕದ್ದು. ನಾನು ನೋಡಿದೆ : ಎಂತೆಂಥಹ ವಿಚಾರಗಳು ಇಲ್ಲಿ ಬಂದಿವೆಯೆಂದರೆ ಸ್ಟೇಟ್ ಎಕ್ಸೈಸ್ ಬಗ್ಗೆ ಮತ್ತು ಅನೇಕ ವಿಚಾರಗಳೂ ಕೂಡ ಇವೆ. ಎಕ್ಸೈಸ್‌ನಲ್ಲಿ ಇವರು ರೆಕ್ಟಿಫೈಡ್ ಸ್ಪಿರಿಟ್ ಏನು ಕೊಡುತ್ತಾರೆ, ಅದನ್ನು ಕೊಡತಕ್ಕಂಥ ವಿಚಾರದಲ್ಲಿ ಅವರಿಗೆ ಎಂಟು ಕೋಟಿ ರೂಪಾಯಿಗಳನ್ನು ಕೊಡಬೇಕು ಎನ್ನತಕ್ಕಂಥ ವಿಚಾರವನ್ನು ಇದರಲ್ಲಿ ಹೇಳಿದ್ದಾರೆ. ಮತ್ತು ಹಣವನ್ನು ಕೊಡಬೇಕಾಗಿ ಬಂತು ಎನ್ನತಕ್ಕಂಥ ವಿಚಾರಗಳಲ್ಲದೆ ಇನ್ನು ಬಹಳ ದೊಡ್ಡ ದೊಡ್ಡ ವಿಚಾರಗಳಿವೆ. ಈಗ ಇಲ್ಲಿ ಇದನ್ನು ನಮ್ಮ ಕೈಗೆ ಕೊಟ್ಟಿದ್ದೀರಿ. ನಮ್ಮ ಹಳ್ಳಿ ಕಡೆ ಒಂದು ಗಾದೆ ಇದೆ : ಏನೆಂದರೆ

"ಎತ್ತುಗಳನ್ನು ನೀರಿಗೆ ಎಳೆದು ಬಿಟ್ಟು ಕೊಂಬುಗಳನ್ನು ನೋಡಿ ವ್ಯಾಪಾರ ಮಾಡಿದಂತೆ" ಆ ರೀತಿ ಈ ಅಗಾಧವಾದಂಥ ವಿಚಾರಗಳನ್ನು ಇವೊತ್ತಿನ ದಿವಸ ಇಲ್ಲಿ ಪ್ರಸ್ತಾಪ ಮಾಡುತ್ತಿರುವುದರಿಂದ, ಇದನ್ನು ದಯವಿಟ್ಟು ಇವೊತ್ತು ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ಈಗ ನಮ್ಮ ಕೈಗೆ ಕೊಟ್ಟಿರುವುದರಿಂದ ನಾವ್ಯಾರು ಕೂಡ ಇದರ ಬಗ್ಗೆ ಚರ್ಚೆ ಮಾಡಲು ತಯಾರಾಗಿ ಬಂದಿಲ್ಲ, ತಯಾರಾಗಿ ಬರಬೇಕಾಗಿದೆ, ಇದರ ಬಗ್ಗೆ ನಾವು ಹಳೆಯ ಕಡತಗಳನ್ನು ನೋಡಬೇಕಾಗುತ್ತದೆ. ಇದರ ಜೊತೆಗೆ ಮತ್ತೊಂದು ವಿಚಾರವನ್ನ ತಮ್ಮ ಗಮನಕ್ಕೆ ತರತಕ್ಕಂಥಾದ್ದು ಏನೆಂದರೆ, ಈ ವರ್ಷದ ಬಜೆಟ್‌ನಲ್ಲಿ ನಾವ್ಯಾರೂ ಕೂಡ ಭಾಗವಹಿಸಿರಲಿಲ್ಲ. ಆ ಕಡೆ ಉಳಿತಿರತಕ್ಕಂಥ ಸದಸ್ಯರುಗಳು ಕೈ ಎತ್ತಿ ಬಜೆಟ್ ಅನ್ನು ಪಾಸ್ ಮಾಡಿಕೊಂಡು ಹೋಗಿದ್ದಾರೆ. ಈಗ ಪೂರಕ ಬೇಡಿಕೆಗಳು ಬಂದಂಥ ಸಂದರ್ಭದಲ್ಲಿ ಕೂಡ ನಮ್ಮ ಅನಿಸಿಕೆಗಳನ್ನು ಕೂಡ ನಾವು ಹೇಳಬೇಕಾಗುತ್ತದೆ. ಉಸಿರು ಕಟ್ಟತಕ್ಕಂಥ ಇವೊತ್ತಿನ ಪರಿಸ್ಥಿತಿಯಲ್ಲಿ ಇಲ್ಲಿ ಪಾಸಾಗಬೇಕು, ಮತ್ತು ಇದು ಕೌನ್ಸಿಲ್‌ಗೆ ಹೋಗಬೇಕೆಂದು ದಿಢೀರ್ ಬಂದು ಮಾನ್ಯ ಮುಖ್ಯಮಂತ್ರಿಗಳು ಹೇಳುವುದಾದರೆ ನಾವು ಹೊರಗಡೆ ಹೋಗಬೇಕಾಗುತ್ತದೆ. ಇಲ್ಲವೆಂದರೆ, ನಿಮ್ಮ ಇಷ್ಟ ಬಂದಂತೆ ನೀವು ಕೈ ಎತ್ತಿರಿ ನಾವು ಪಾಸ್ ಮಾಡಿಕೊಂಡು ಹೋಗುತ್ತೇವೆನ್ನುವ ನೀತಿಯನ್ನು ಅನುಸರಿಸುವುದಾದರೆ ನೀವು ಅದನ್ನೇ ಮಾಡಿಕೊಳ್ಳಿ.

ಉಪಾಧ್ಯಕ್ಷಣಿಯವರು : ಅದನ್ನು ಅವರು ಈಗಾಗಲೇ ಮಂಡನೆ ಮಾಡಿದ್ದಾರೆ, ಈಗ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಸಿ. ಬೈರೇಗೌಡ : ಉಪಾಧ್ಯಕ್ಷಣಿಯರೇ, ನನಗಂತೂ ಈ ಚರ್ಚೆಯಲ್ಲಿ ಭಾಗವಹಿಸಲು ಆಗುವುದಿಲ್ಲ. ಏನೆಂದು ನಾವು ಚರ್ಚೆಯಲ್ಲಿ ಭಾಗವಹಿಸಬೇಕು ? ಅನೇಕ ವಿಷಯಗಳನ್ನು ಈ ರಾಜ್ಯದ ಜನತೆಯ ಗಮನಕ್ಕೆ ತರಬೇಕಾಗಿದೆ. ಅದಕ್ಕೋಸ್ಕರವಾಗಿ ಈ ಸದನವನ್ನು 15 ದಿನಗಳ ನಡೆಸಬೇಕು; ಅದೇ ಕಾರಣಕ್ಕಾಗಿ ಇದು ಒಂದೆರಡು ದಿನ ಚರ್ಚೆಯಾಗಬೇಕಾಗಿದೆ. ಆದುದರಿಂದ 15 ದಿನಗಳ ಕಾಲ ಈ ಅಧಿವೇಶನವನ್ನು ಮುಂದುವರಿಸಬೇಕೆಂದು ತಮ್ಮಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ಬೇಡಿಕೊಂಡೆವು. ಆದರೆ ಅವರು ಅದನ್ನು ಒಪ್ಪಿಕೊಳ್ಳಲು ತಯಾರಾಗಲಿಲ್ಲ. ನಮಗೆ ಬಹುಮತವಿದೆ, ನೀವು ಒಪ್ಪಿದರೆ ಒಪ್ಪಿ, ಬಿಟ್ಟರೆ ಬಿಡಿ ಎಂದು ನೀವೇ ಮಾಡಿಕೊಳ್ಳುವುದಾದರೆ ಅದು ನಿಮಗೆ ಬಿಟ್ಟಿರತಕ್ಕ ವಿಚಾರ. ಆದುದರಿಂದ ಇದನ್ನು ನಾವು ಖಂಡಿತವಾಗಿ ಒಪ್ಪುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ಕ್ಷಮಿಸಿ. ಸರ್ಕಾರಕ್ಕೆ ತಮಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ, ದಯಮಾಡಿ ನಾವು ಹೇಳುವುದಕ್ಕೆ ಅವಕಾಶ ಕೊಡಬೇಕು. The opposition will have it say and the Ruling Party will have its way. That is always there. You could have your way provided we had our say. Please allow us to have our say. For the time being, we are not prepared for discussion because it has been given to us just now. ಇದನ್ನು ದಯವಿಟ್ಟು ಗಮನದಲ್ಲಿಟ್ಟುಕೊಂಡು ನಮ್ಮ ಪರಿಸ್ಥಿತಿ ಏನು ಇದೆ ಎನ್ನತಕ್ಕದನ್ನು ಗಮನಿಸಬೇಕೆಂದು ತಮ್ಮ ಮೂಲಕ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಉಪಾಧ್ಯಕ್ಷಿಣಿಯರೆ, ಅನೇಕ ಇಲಾಖೆಗಳ, ಸುಮಾರು 1179 0 ಕೋಟಿಗಳ ಒಟ್ಟು ಮೊತ್ತದ ಈ ಒಂದು ಪೂರಕ ಅಂದಾಜುಗಳ ಬಗ್ಗೆ ಅನೇಕ ವಿಚಾರಗಳನ್ನು ಹೇಳತಕ್ಕ ಅವಕಾಶ ನಮಗೆ ನಿಜವಾಗಿಯೂ ಸಿಕ್ಕಿವೆ ಎಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ಹಿಂದೆ ನಾವು ಸದನದಲ್ಲಿ ಈ ಸದನವನ್ನು ಬಹಿಷ್ಕರಿಸಿ ಹೊರಗೆ ಹೋಗಿದ್ದೆವು. ಆದರೆ ಈಗ ಖಂಡಿತವಾಗಿ ಸದನವನ್ನು ಬಹಿಷ್ಕರಿಸಿ ಹೋಗುವುದಿಲ್ಲ. ಆದುದರಿಂದ ನಮಗೆ ದಯಮಾಡಿ ಹೇಳುತ್ತಿದ್ದೇನೆ. ಇದನ್ನು ಮಂಡಿಸಲೇಬೇಕೆಂಬ ಹಠವನ್ನು ತಾವು ಮಾಡಬಾರದು. ಮಾನ್ಯ ಮುಖ್ಯಮಂತ್ರಿಗಳಲ್ಲಿ ಸಭೆಯ ಮೂಲಕ ಒಂದು ಗಮನಾರ್ಹವಾದ ವಿಚಾರವನ್ನು ತರುತ್ತಿದ್ದೇನೆ, ಏಕೆ ನೀವು ಅದರ ಬಗ್ಗೆ ಚರ್ಚೆಯನ್ನು ಮಾಡಲು ಅವಕಾಶವನ್ನು ಕೊಡುವುದಿಲ್ಲ? ನಿಮಗೆ ಆನೆಯ ಬಲ ಇದೆ ಹಾಗಾದರೆ ನಿಮ್ಮನ್ನು ಏನಾದರೂ ತಡೆದು ನಿಲ್ಲಿಸಲು

ಸಾಧ್ಯವೋ? ನಾವು ಕೆಲವು ವಿಚಾರಗಳನ್ನು ಹೇಳುತ್ತೇವೆ, ಕೆಲವು ವಿಚಾರಗಳ ಮೇಲೆ ಬೆಳಕನ್ನು ಚೆಲ್ಲುತ್ತೇವೆ ಇದರಿಂದ ನಿಮಗೆ ಇನ್ನೂ ಕೂಡ ಉತ್ತರಗಳನ್ನು ಹೇಳುವುದರಲ್ಲಿ ಅನುಕೂಲವಾಗುತ್ತದೆ. ಸರ್ಕಾರಕ್ಕೆ ಅನೇಕ ವಿಚಾರಗಳಲ್ಲಿ ಬೆಳಕನ್ನು ಚೆಲ್ಲಲು ನಮಗೆ ಅವಕಾಶವಾಗುತ್ತದೆ. ಆದುದರಿಂದ ತಮಗೆ ನಾನು ಹೇಳುತ್ತೇನೆ, ಹಠ ಮಾಡುವುದಕ್ಕೆ ಹೋಗದೆ ಎರಡು ದಿನ ಚರ್ಚೆಗೆ ಅವಕಾಶ ಮಾಡಿಕೊಡಿ. ಇದರಿಂದ ನಿಮಗೇನಾಗುತ್ತದೆ?

ಉಪಾಧ್ಯಕ್ಷೆಣಿಯರು : ಅವರು ಏನು ಹೇಳುತ್ತಾರೋ ಅದನ್ನು ಮೊದಲು ಕೇಳೋಣ.

ಶ್ರೀ ವಾಟಾಳ್ ನಾಗರಾಜ್ : ಆದುದರಿಂದ ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ, ದಯಮಾಡಿ ಇದನ್ನು ತರಾತುರಿಯಲ್ಲಿ ತರಬೇಡಿ, ಆತುರವಾಗಿ ಮಾಡಲು ಹೋಗಬೇಡಿ. ಈವತ್ತೇ, ಅದು ಪಾಸ್ ಆಗಬೇಕೆಂದು ನಿಮಗೆ ಏನು ಹಠ ಇದೆ ಅದು ಬೇಡ. ತಾವೂ ಸಹ ಈ ಕಡೆ ಹಿಂದೆ ಹಲವಾರು ಬಾರಿ ಕುಳಿತಿದ್ದಿರಿ ತಾವು ದಿನಗಟ್ಟಲೆ, ಗಂಟೆಗಟ್ಟಲೆ ಭಾಷಣ ಮಾಡಿರುವುದನ್ನು ಮೊನ್ನೆ ದಿನ ಓದಿದೆ. ನಿಮ್ಮ ಆಣಿಮುತ್ತುಗಳನ್ನು ಓದಿದೆ. ನಿಜವಾಗಿಯೂ ಗಂಟೆಗಟ್ಟಲೆ ಮಾತನಾಡಿದ್ದೀರಿ. ಆದರೆ ಇಲ್ಲಿ ಈಗ ನಾವು ಮಾತನಾಡಲು ಎದ್ದರೆ ನಿಮಗೆ ಸಮಾಧಾನವಿಲ್ಲ. ಈ ಪರಿಸ್ಥಿತಿ ಇದ್ದರೆ ಏನು ಗತಿ? ದಯಮಾಡಿ ಹಳೆಯದನ್ನು ಕೂಡ ತಾವು ಜ್ಞಾಪಿಸಿಕೊಳ್ಳಬೇಕು. ನೀವು ಸಮಾಜವಾದಿ ಸಿದ್ಧಾಂತಕ್ಕೆ ಅಂಟುಕೊಂಡಿರತ್ಕವರು, ವಿರೋಧ ಪಕ್ಷದಲ್ಲಿ ಇದ್ದಂಥವರು, ತಾವು ಮುಖ್ಯಮಂತ್ರಿಗಳಾದ ತಕ್ಷಣ ಅವೆಲ್ಲವನ್ನು ಗಾಳಿಗೆ ತೂರಿ ನನ್ನದೇ ಸರಿ ಎನ್ನತಕ್ಕ ನೀತಿಗೆ ಹೋಗಬಾರದೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಉಪಾಧ್ಯಕ್ಷೆಣಿಯರೇ, ಮಾನ್ಯ ಸದಸ್ಯರುಗಳ ಹಕ್ಕನ್ನು ಮೊಟಕು ಮಾಡಬೇಕೆಂಬತಕ್ಕಂಥ ಉದ್ದೇಶ ಸರ್ಕಾರಕ್ಕೆ ಇಲ್ಲ ಎನ್ನತಕ್ಕ ಮಾತನ್ನು ಇಂದಲ್ಲ, ಹಿಂದೆಯೂ ಹೇಳಿದ್ದೇನೆ. ಈಗಲೂ ಹೇಳುತ್ತೇನೆ ಮತ್ತೆ ಮುಂದೂ ಕೂಡ ಅದನ್ನೇ ಹೇಳುತ್ತೇನೆ. ಆ ಒಂದು ನೀತಿಯನ್ನು ಪ್ರತಿಪಾದನೆ ಮಾಡತಕ್ಕವರಲ್ಲಿ ನಾನು ಕೂಡ ಒಬ್ಬನಾಗಿ ಈ ಮಾತನ್ನು ಹೇಳುತ್ತಿದ್ದೇನೆ. ನಾನು ಹಿಂದಿನ ಚರಿತ್ರೆಗೆ ಹೋಗಲಿಲ್ಲ. ತಾವು ಆದನ್ನು ಹೇಳಿದ್ದರಿಂದ ನಾನು ಹೇಳಬೇಕಾಯಿತು, ಇಲ್ಲದಿದ್ದರೆ ನಾನು ಆ ವಿಷಯವನ್ನು ಪ್ರಸ್ತಾಪ ಮಾಡುತ್ತಿರಲಿಲ್ಲ. ತಾವು ಕಳೆದ ಸಲದ ಬಜೆಟ್ ಅಧಿವೇಶನದಲ್ಲಿ ಮಾತನಾಡಲು ಆಗಲಿಲ್ಲ. ಆದುದರಿಂದ ಈಗ ಆ ಅವಕಾಶವನ್ನು ಕೊಡಿ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ನಾವು ನಿಮಗೆ ಅವಕಾಶವನ್ನು ಕೊಡಬಾರದು, ಭಾಷಣ ಮಾಡಬಾರದು, ಚರ್ಚೆ ಮಾಡಬಾರದು, ಅಧಿವೇಶನದಲ್ಲಿ ಭಾಗವಹಿಸಬಾರದು ಎಂದು ಹೇಳಲಿಲ್ಲ. ನಾವು ಅದಕ್ಕಾಗಿ ನಿಮಗೆ ಕಾದೆವು. ಚರ್ಚೆಯಲ್ಲಿ ಭಾಗವಹಿಸತಕ್ಕ ಅವಕಾಶವನ್ನು ನೀವೇ ಬಿಟ್ಟುಕೊಂಡರೆ ಅದಕ್ಕೆ ನಾವೇನು ಮಾಡಬೇಕು; ಅಧಿವೇಶನವನ್ನು ಮೊಟಕು ಮಾಡತಕ್ಕದ್ದು, ಸರ್ಕಾರಿ ವತಿಯಿಂದ ಎಲ್ಲೆ ನಡೆದಿದೆ ಎನ್ನತಕ್ಕ ಪ್ರಶ್ನೆಯನ್ನು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ನೇರವಾಗಿ ತಮ್ಮನ್ನು ಕೇಳುತ್ತಿದ್ದೇನೆ. ಆದುದರಿಂದ ಅದು ತಮಗೆ ತಾವೇ ಮಾಡಿಕೊಂಡಿದ್ದೇ ವಿನಃ ಇದರಲ್ಲಿ ನಿಮ್ಮದೇನೂ ಇಲ್ಲ. ಅದೆಲ್ಲಾ ಸ್ವಯಂಕೃತ ವಿಚಾರಗಳು. ಅದೆಲ್ಲಾ ತಮಗೆ ಬಿಟ್ಟಿರತಕ್ಕ ವಿಚಾರಗಳು. ಅದರ ಬಗ್ಗೆ ನಾನು ಹೆಚ್ಚೇನೂ ಹೇಳಲು ಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾವು ಇಷ್ಟು ತೀವ್ರವಾಗಿ ಪ್ರತಿಭಟನೆಯನ್ನು ಮಾಡುವುದಕ್ಕೆ ಕಾರಣ ಪ್ರಜಾಪ್ರಭುತ್ವ ನೀತಿಗೆ ವಿರುದ್ಧವಾದ ರೀತಿಯಲ್ಲಿ ನೀವು ನಿಲುವನ್ನು ತೆಗೆದುಕೊಂಡಿದ್ದರಿಂದ ನಾವು ಸ್ವಯಂಕೃತ ಅಪರಾಧವನ್ನು ಮಾಡಿಲ್ಲ. ನೀವು ನಮಗೆ ತಿರುಗುಮುರುಗು ಮಾಡಿ ಹೇಳುತ್ತಿದ್ದೀರಿ. ನಮ್ಮದು ಸ್ವಯಂಕೃತ ಅಪರಾಧವಂತೆ.

ಶ್ರೀ ಎಸ್. ಬಂಗಾರಪ್ಪ : ಇಲ್ಲ, ಇಲ್ಲ. ಸ್ವಯಂಕೃತಾಪರಾಧ ಎಂದು ನಾನು ಹೇಳಲೇ ಇಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರೆ ಪಿಲಪ್ ದಿ ಬ್ಯಾಂಕ್ ಮಾಡುವುದಕ್ಕೆ ನೀವು ಹೋಗಬೇಡಿ. ಏಕೆಂದರೆ ನಾನು ಬ್ಯಾಂಕನ್ನೇ ಬಿಟ್ಟಿಲ್ಲ. ಸ್ವಯಂಕೃತ ಎಂದು ಮಾತ್ರ ನಾನು ಹೇಳಿದ ಅಷ್ಟೆ ನೀವು ಈ ಮಾತನ್ನು ಹೇಳುತ್ತೀರೆಂದು ನನಗೆ ಗೊತ್ತಿತ್ತು. ಸ್ವಯಂಕೃತ ಅಪರಾಧ ಎಂದು ನಾನು ಹೇಳಲಿಲ್ಲ. ತಾವು ಮತ್ತೆ ಅದನ್ನೇ ನೆನಪು ಮಾಡಿಕೊಳ್ಳುವುದಕ್ಕೆ ಏತಕ್ಕೆ ಹೋಗುತ್ತೀರೆಂದು ನಾನು

ಹೇಳಬೇಕಾಗುತ್ತದೆ. ಅದನ್ನು ಹೇಳತಕ್ಕ ಆಸಕ್ತಿ ನನಗೆ ಇಲ್ಲ. ಈಗ ಇದನ್ನು ಏತಕ್ಕೆ ನಾವು ಮುಂದಕ್ಕೆ ಮಾಡಿದ್ದೇವೆ. as required under the Constitution. Yes, ತಮಗೆ ಗೊತ್ತಿರುವ ಹಾಗೆ ಎಷ್ಟೋ ಸಾರಿ ಚರ್ಚೆಯೇ ಇಲ್ಲದೇ ಪಾಸ್ ಮಾಡಿರತಕ್ಕದ್ದು ಇದೆ. ತಾವು ದಾಖಲೆಗಳನ್ನು ತೆಗೆದು ನೋಡಿ. ಕೆಲವು ಸಾರಿ ನಾವೇ ಪಾಸ್ ಮಾಡಿಕೊಂಡು ಹೋಗಿ ಎಂದು ಹೇಳಿದ್ದೇವೆ. ನಿಮಗೆ ನಮ್ಮ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲದಿದ್ದರೆ ಏನು ಗತಿ?

ಶ್ರೀ ವಾಟಾಳ್ ನಾಗರಾಜ್ : ನಾನು ಹಿಂದೆ ಈ ಬೆಂಗಳೂರು ನಗರದ ಕಾರ್ಪೋರೇಷನ್ ಸದಸ್ಯನಾಗಿದ್ದೆ. ಅಲ್ಲಿ ಮೇಯರ್‌ನ ಅಧ್ಯಕ್ಷತೆಯಲ್ಲಿ ಆಡಳಿತ ಪಕ್ಷದ ನಾಯಕರು 1ರಿಂದ 80ರವರೆಗೆ ಇರತಕ್ಕ ಎಲ್ಲಾ ನಿರ್ಣಯಗಳೂ ಪಾಸ್ ಎಂದು ಹೇಳುತ್ತಿದ್ದರು. ಆದರೆ ಆ ಪರಿಸ್ಥಿತಿ ನಮ್ಮ ಈ ಸಭೆಗೆ ಬರತಕ್ಕದ್ದು ಬೇಡ. 1ರಿಂದ 80ರವರೆಗೆ ಎಂದರೆ ಯಾವುವು ಎಂದು ಆ ನಿರ್ಣಯವನ್ನು ಅವರು ಓದುತ್ತಿರಲಿಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಇದಕ್ಕೆ ನಾವು ಕಾರಣವೋ, ನೀವು ಕಾರಣವೋ ಎಂಬುದನ್ನೆಲ್ಲಾ ಮಾತನಾಡುವುದು ಬೇಡ.

ಶ್ರೀ ಎಸ್. ಬಂಗಾರಪ್ಪ : ನಾವು ಆ ರೀತಿ ಮಾಡುವುದಕ್ಕೆ ಹೋಗಿಲ್ಲ. ನಾವು ವಿಚಾರವನ್ನು ಇಟ್ಟಿದ್ದೇವೆ. ಚರ್ಚೆ ಮಾಡುತ್ತೇನೆಂದು ಹೇಳಿದಿರಿ, ಮಾಡಿ ಎಂದು ನಾವು ಹೇಳಿದ್ದೇವೆ. ಅಷ್ಟರೊಳಗೆ ಗುಲ್ಬರ್ಗಾಕ್ಕೆ ಸಂಬಂಧಪಟ್ಟಂತೆ ಬರಗಾಲದ ವಿಚಾರದಲ್ಲಿ ಮಾತನಾಡಬೇಕೆಂದು ಹೇಳಿದರು. ಆಯಿತು ಎಂದು ಹೇಳಿದೆವು. ಅದು ಪಾಸ್ ಆದಮೇಲೆ ಅಪ್ರೋಪ್ರಿಯೇಷನ್ 'ಬಿಲ್' ಪಾಸ್ ಆಗಿ ಆ ಸದನಕ್ಕೆ ಹೋಗಬೇಕಾದಂಥ ಕಾನೂನು ವಿಚಾರವಾಗಿರುವುದರಿಂದ ಅದನ್ನು ತಮ್ಮ ಗಮನಕ್ಕೆ ತಂದೆ. ತಮ್ಮ ಅನುಮೋದನೆಯನ್ನು ಮಾನ್ಯ ಅಧ್ಯಕ್ಷರ ಮುಖಾಂತರ ನಾನು ಕೇಳಿದ್ದೇನೆ.

ಶ್ರೀ ಸಿ. ಬೈರೇಗೌಡ : ಕಂಟಿಂಜೆನ್ಸಿ ಫಂಡ್ ಎಂದು 500 ಕೋಟಿ ರೂ.ಗಳೆಂದು ಮಾಡಿಕೊಂಡಿದ್ದೀರಿ. ಆದುದರಿಂದ ಈಗ ಇದು ಪಾಸ್ ಆಗದಿದ್ದರೂ ಕೂಡ ತಕ್ಷಣದಲ್ಲಿ ನೀವು ಹಣವನ್ನು ಖರ್ಚು ಮಾಡುವುದಕ್ಕೆ ಯಾವ ತೊಂದರೆಯೂ ಇಲ್ಲ. 500 ಕೋಟಿ ರೂವರೆಗೆ ಒಂದು ಆರ್ಡಿನೆನ್ಸ್‌ನ್ನು ಹೊರಡಿಸಿ, ಪಾಸ್‌ಮಾಡಿಕೊಂಡಿದ್ದೀರಿ. ನೀವು ಅದರಲ್ಲಿ ಖರ್ಚುಮಾಡಿಕೊಳ್ಳಬಹುದು. ನಾಳೆ ಖರ್ಚು ಮಾಡುವುದಕ್ಕೆ ಹಣವಿಲ್ಲ, ತೊಂದರೆಯಾಗುತ್ತದೆಂದು ಹೇಳುವುದಾದರೆ, ನಾವು ಒಪ್ಪಿಕೊಳ್ಳಬಹುದಾಗಿತ್ತು ಈ ಸರ್ಕಾರವನ್ನು ಪೇಚಿಗೆ ಸಿಕ್ಕಿಸಬೇಕೆಂಬ ಅಭಿಪ್ರಾಯ ನಮಗಿಲ್ಲ. ನಿಮಗೆ ಅವಕಾಶ ಇದೆ. ನಾವು ಏನು ಹೇಳುತ್ತೇವೆಂದರೆ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು.

ಶ್ರೀ ಎಸ್. ಬಂಗಾರಪ್ಪ : ಅದಕ್ಕೇ ನಾನು ಹೇಳುತ್ತೇನೆ. ಒಂದು ವೇಳೆ ನಾವು ಇದನ್ನು ಇಡದೇ ಇದ್ದಿದ್ದರೆ ತಾವು ಏನು ಹೇಳುತ್ತಿದ್ದಿರಿ, ಸದನ ಸೇರಿತ್ತು, ನೀವು ಆಗಲೇ ಪಾಸ್ ಮಾಡಿಕೊಳ್ಳಬೇಕಾಗಿತ್ತು. ಏತಕ್ಕೆ ಮಾಡಿಕೊಳ್ಳಲಿಲ್ಲ, ಅಂದರೆ ನೀವು ರಾಜ್ಯಾಂಗಕ್ಕೆ ಧಿಕ್ಕಾರ ಮಾಡಿ ಹೋದಿರಿ ಎನ್ನತಕ್ಕ ಮಾತು ಬರಬಹುದೆಂದು ಯೋಚನೆ ಮಾಡಿ ನಾವು ಈಗಲೇ ಇದನ್ನು ಇಂಟ್ರಡ್ಯೂಸ್ ಮಾಡಿದ್ದೇವೆ. ಅದು ಡಿಸ್ಕರ್ಷನ್ ಸ್ಟೇಜ್‌ನಲ್ಲಿದೆ. ಆ ಸದನ ಕೂಡ ಕಾಯುತ್ತಿದೆ ಎನ್ನತಕ್ಕ ಮಾತನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಅಷ್ಟು ಬಿಟ್ಟು ಬೇರೆ ಏನೂ ಇಲ್ಲ. ಇದು ಒಂದು ಚಿಕ್ಕ ವಿಚಾರ. ಇದು ದೊಡ್ಡ ವಿಚಾರವೇನೂ ಅಲ್ಲ. ಇದು ಇಡೀ ವರ್ಷದ ಬಜೆಟ್ ಏನೂ ಅಲ್ಲ.

ಶ್ರೀ ಸಿ. ಬೈರೇಗೌಡ : ಇದರಲ್ಲಿ 8 ಕೋಟಿ ರೂ. ರೆಕ್ಟಿಫೈಡ್ ಸ್ಪಿರಿಟ್ ವಿಚಾರ ಇದೆ. ಇದು ಸಣ್ಣ ಹಣವೇ? ಇವತ್ತು ಇದು ಸದನದಲ್ಲಿ ಚರ್ಚೆಗೆ ಬರುತ್ತದೆಯೆ ತಿಳಿದಿದ್ದರೆ ನಾನು ಇದರ ಬಗ್ಗೆ ತಯಾರಾಗಿ ಬರುತ್ತಿದ್ದೆ. ಇದರಲ್ಲಿ 8 ಕೋಟಿ ರೂ. ವಿಚಾರ ಅಡಗಿದೆ.

ಶ್ರೀ ಎಸ್. ಬಂಗಾರಪ್ಪ : ಬೈರೇಗೌಡರೇ, ನೀವು ಬಹಳ ಅನುಭವಸ್ಥರು. ಇದು ಯಾವ ಬಜೆಟ್ ಎಂದು ನೀವು ತಿಳಿದುಕೊಂಡಿದ್ದೀರಿ.....

(ಗೊಂದಲ)

ಶ್ರೀ ಸಿ. ಬೈರೇಗೌಡ : 8 ಕೋಟಿ ರೂ. ಏನೆಂಬುದನ್ನು ನಾವು ತಿಳಿದುಕೊಳ್ಳಬೇಕಲ್ಲಾ. ಈವತ್ತು ಇದರಲ್ಲಿ ಅದರ ಬಗ್ಗೆ ಬೆಳಕು ಚೆಲ್ಲಬೇಕಲ್ಲಿ ಚರ್ಚಾವನ್ನು ಎತ್ತತಕ್ಕ ಪರಿಸ್ಥಿತಿಯಲ್ಲಿ ನಾವು ಇಲ್ಲ.

ಶ್ರೀ ಎಸ್. ಬಂಗಾರಪ್ಪ : ಚಕಾರ ಎತ್ತದೆ ಪಾಸ್ ಮಾಡಿ ಕೊಟ್ಟಿದ್ದೀರಿ ಎನ್ನತಕ್ಕ ಮಾತನ್ನು ನಾನು ಹೇಳಿದೆ. ಚಕಾರ ಎತ್ತುವುದಾದರೆ ಪ್ರತಿಯೊಂದರ ಮೇಲೂ ಎತ್ತಬಹುದು. ಆದುದರಿಂದ ನಾನು ಹೇಳುವುದೇನೆಂದರೆ ಇಂಥ ವಿಚಾರಗಳನ್ನು ಹರಿಬರಿಯಲ್ಲಿ ತೋರಿಸಬೇಕೆಂದು ಏನೂ ಇಲ್ಲ. ಸಾಮಾನ್ಯ ನಡವಳಿಕೆಯಲ್ಲಿ ಹೋಗುವಂಥ ಇವುಗಳನ್ನು ಮಾತು ಪಾಸ್ ಮಾಡಿಕೊಡಿ. ತಾವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ತಮಗೆ ಗೊತ್ತಿದೆ. ತಾವು ಇದನ್ನು ಒಪ್ಪುತ್ತೀರೆಂದು ನಾನ ಭಾವಿಸುತ್ತೇನೆ. ಆದ್ದರಿಂದ ಅಧ್ಯಕ್ಷರ ಅನುಮತಿ ಪಡೆದು ತಾವು ಇದರ ಬಗ್ಗೆ ಚರ್ಚೆಯನ್ನು ಮಾಡಿ ಪಾಸ್ ಮಾಡಿಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ನಾವು ಇಲ್ಲಿ ಪಾಸ್ ಮಾಡಿಕೊಟ್ಟಿದ್ದೇವೆ ಎಂದು ನಾವು, ನಾವು ಎಂದು ಪ್ರತಿಸಾರಿಯೂ ನೀವು ಹೇಳುತ್ತಿದ್ದೀರಿ. ನಾವು ಈ ಕಡೆ ಕೂತಿರುವುದೇ ಒಂದು ಅಪರಾಧವಾಗಿದೆ.

ಉಪಾಧ್ಯಕ್ಷೆಣಿಯವರು : ಈಗ ನೀವು ಮಾತನಾಡಬಹುದಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : (ಶಿಕಾರಿಪುರ) ಪೂರಕ ಬೇಡಿಕೆಗಳನ್ನು ಪಾಸ್ ಮಾಡಿಕೊಡುವುದಕ್ಕೆ ನಮ್ಮ ಅಭ್ಯರ್ಥಿಂತರವೇನೂ ಇಲ್ಲ. ಇದನ್ನು ನಾವು ಪಾಸ್ ಮಾಡಲೇಬೇಕಾಗುತ್ತದೆ. ಆದರೆ ನಾನು ಮಾನ್ಯ ಸಭಾ ನಾಯಕರಲ್ಲಿ ಕೇಳಿಕೊಳ್ಳುವುದೇನೆಂದರೆ ನಾನು ನಿಜವಾಗಿ ಇದನ್ನು ಇಂಟ್ರಡ್ಯೂಸ್ ಮಾಡಬೇಕು, ಇದನ್ನು ಪಾಸ್ ಮಾಡಿಸಿಕೊಳ್ಳಬೇಕೆಂದು ಅವರು ತೀರ್ಮಾನ ಮಾಡಿಕೊಂಡಿದ್ದರೆ 10ನೇ ತಾರೀಖು ನಾವು ಇಲ್ಲಿ ಸೇರಿದಾಗ ಇದರ ಪ್ರತಿಗಳನ್ನು ನಮಗೆ ಕೊಟ್ಟಿದ್ದಿದ್ದರೆ ಇವತ್ತು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಸಿಕ್ಕುತ್ತಿತ್ತು ಹಾಗೂ ಇದನ್ನು ನಾವು ಓದಿಕೊಂಡು ಬಂದು ಚರ್ಚೆ ಮಾಡುತ್ತಿದ್ದೆವು.

ಇಲ್ಲಿ ಇದು ಪಾಸಾದ ಮೇಲೆ ಇದು ಮೇಲ್ಮನೆಗೆ ಹೋಗಿ ಪಾಸಾಗಿ ಬರಬೇಕಾಗಿದೆ. ಈ ಭಾಗದಲ್ಲಿ ತಾವು ಕುಳಿತಿದ್ದರೆ ಏನು ಮಾಡುತ್ತಿದ್ದೀರಿ ಎಂಬುದನ್ನು ಯೋಚನೆ ಮಾಡಿ. ಕುಡಿಗಲ್ ಹಗರಣದ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಇನ್ನೂ ಅನೇಕ ಪ್ರಮುಖವಾದ ನೋಟೀಸುಗಳನ್ನು ನಾವು ಕೊಟ್ಟಿದ್ದೇವೆ. ಅದಕ್ಕೆ ಮಾನ್ಯ ಅಧ್ಯಕ್ಷರು ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಈ ಸಮಯದಲ್ಲಿ ಇದರ ಬಗ್ಗೆ ತೀವ್ರವಾದ ಚರ್ಚೆಯಾಗಬೇಕು. ಚರ್ಚೆಯಾಗದೆ ಹಾಗೇ ಪಾಸ್ ಮಾಡಿಕೊಂಡು ಹೋಗಿ. ನೀವು ಇಲ್ಲಿ ಕುಳಿತಿದ್ದರೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಿದ್ದಿರೋ ಇಲ್ಲವೋ ಇನ್ನೂ ಅನೇಕ ಪ್ರಮುಖ ವಿಚಾರಗಳು ಇವೆ. ಜನತಾದಳದ ಸ್ನೇಹಿತರು ಅವರದ್ದೆ ಆದ ಬೇರೆ ಬೇರೆ ಕಾರಣಕ್ಕೋಸ್ಕರ ಅವರುಗಳು ಇಲ್ಲಿ ಯಾರೂ ಇಲ್ಲ. ಅದರ ಬಗ್ಗೆ ಇಲ್ಲಿ ಚಿಂತನೆ ಮಾಡುವುದು ಅಗತ್ಯವಿಲ್ಲ. ಅದು ಸಂಬಂಧವಿಲ್ಲದೇ ಇರುವಂಥಾದ್ದು. ನಮ್ಮ ನೋಟೀಸ್‌ನ ಚರ್ಚೆಗಾದರೂ ಅವಕಾಶ ಮಾಡಿಕೊಡಿ. ಈಗ ಬೇರೆ ವಿಚಾರಗಳೇನಿವೆ ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಆದಾದ ನಂತರ ತಾವು ಇದನ್ನು ಇಂಟ್ರಡ್ಯೂಸ್ ಮಾಡಿ. ಈಗ ಇನ್ನೂ ಇಂಟ್ರಡ್ಯೂಸ್ ಮಾಡಿಲ್ಲ, ಇಂಟ್ರಡ್ಯೂಸ್ ಮಾಡಿದ ಮೇಲೆ ನಾಳೆ ನಾಡಿದ್ದು ಚರ್ಚೆಗೆ ತೆಗೆದುಕೊಳ್ಳೋಣ, ಪಾಸ್ ಮಾಡಿಕೊಡುತ್ತೇವೆ ಅದರ ಬಗ್ಗೆ ನಮ್ಮದೇನೂ ಅಭ್ಯಂತರ ಇಲ್ಲ. ಒಂದು ವೇಳೆ ನಮಗೆ ಬಹುಮತವಿದೆ ಪಾಸ್ ಮಾಡಿಕೊಳ್ಳುತ್ತೇವೆಂದು ಹೇಳುವುದಾದರೆ ತಾವು ಮಾಡಿಕೊಳ್ಳಿ, ನಾವು ಅನಿವಾರ್ಯವಾಗಿ ಹೊರಗೆ ಹೋಗಬೇಕಾಗುತ್ತದೆ.

ಉಪಾಧ್ಯಕ್ಷೆಣಿಯವರು : ತಾವು ಚರ್ಚೆಯಲ್ಲಿ ಸ್ವಲ್ಪ ಹೊತ್ತು ಭಾಗವಹಿಸಬಹುದು, ಉಳಿದ ವಿಷಯವನ್ನು ನಂತರ ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ರೆಕ್ಟಿಫೈಡ್ ಸ್ಪಿರಿಟ್‌ಗೆ ಸಂಬಂಧಪಟ್ಟಂತೆ 8 ಕೋಟಿ ರೂಪಾಯಿಗಳಿದ್ದು, ಹಾಗೂ ಇನ್ನೊಂದು 24 ಗಂಟೆಯಲ್ಲಿ 5 ಕೋಟಿ 27 ಲಕ್ಷ ರೂಪಾಯಿ ಮಂಜೂರು ಮಾಡಿಕೊಂಡು ನೂರು ಕಂಪ್ಯೂಟರ್ ತೆಗೆದುಕೊಂಡಿರುವುದು ಇದರಲ್ಲಿ ಸೇರಿದೆ. ಇವೆರಡನ್ನೂ ಸಂದಿಯಲ್ಲಿ ಸೇರಿಸಿದ್ದಾರೆ. ಇವೆರಡೂ ಇಲ್ಲದಿದ್ದರೆ ನಾವು ಚರ್ಚೆ ಮಾಡುವುದಕ್ಕೆ

ಹೋಗುತ್ತಿರಲಿಲ್ಲ. ಇನ್ನೂ ಅನೇಕ ವಿಚಾರಗಳು ಚರ್ಚೆಗೆ ಬರಬೇಕಾಗಿದೆ. ಇಷ್ಟು ತರಾತುರಿಯಿಂದ ಇದನ್ನು ಇಲ್ಲಿ ಇಡುವ ಅಗತ್ಯವಿಲ್ಲ. ಇಡದಿದ್ದರೆ ಏನು ಅನಾಹುತವಾಗುತ್ತದೆಂಬುದನ್ನು ಹೇಳಿ.

ಶ್ರೀ ಎಸ್. ಬಂಗಾರಪ್ಪ : ಬಹುಮತ ಅಥವಾ ಅಲ್ಪಮತದ ಪ್ರಶ್ನೆ ಇಲ್ಲಿ ಇಲ್ಲ. ಯಾವುದೇ ಸರಕಾರವಿದ್ದರೂ ರಾಜ್ಯಾಂಗ ಬದ್ಧವಾಗಿ ಮಾಡತಕ್ಕಂತಹ ಕರ್ತವ್ಯದ ಪ್ರಶ್ನೆ ಇಲ್ಲಿ ಅಡಗಿದೆಯೆಂಬುದನ್ನು ತಾವು ಮನಗಂಡಿದ್ದೀರಿ ಎಂದು ಭಾವಿಸಿದ್ದೇನೆ. ನಾನು ಹೇಳತಕ್ಕಂಥಾದ್ದು ಇಷ್ಟೇ, ನೀವು ಎಷ್ಟೇ ಹೇಳಿದರೂ ಇವೆಲ್ಲಾ ಪಾಸಾಗಿ ಹೋಗತಕ್ಕಂತಹ ಈ ಮೂಲಭೂತ ವಿಚಾರಗಳು ತಮ್ಮ ಗಮನದಲ್ಲಿದೆ ಎಂದು ನಾನು ಭಾವಿಸಿದ್ದೇನೆ. 10ನೇ ತಾರೀಖು ಕೊಟ್ಟರೂ ಅಷ್ಟೇ ಈಗ ಕೊಟ್ಟರೂ ಅಷ್ಟೇ. ಹೆಚ್ಚೇನೂ ಇದರಲ್ಲಿ ಬರುವ ಹಾಗಿಲ್ಲ. ಆದ್ದರಿಂದ ಇದನ್ನು ಪಾಸ್ ಮಾಡೋಣ. ತಾವು ಕುಡಿಗಲ್ ವಿಚಾರ ಹೇಳಿದ್ದೀರಿ ಹಾಗೂ ಇನ್ನಿತರ ವಿಚಾರ ಹೇಳಿದ್ದೀರಿ, ಅದಕ್ಕೋಸ್ಕರ ಇದನ್ನು ತೆಗೆದುಕೊಳ್ಳಬೇಕೆಂಬ ಪ್ರಶ್ನೆ ಅಲ್ಲ. ಇದು ಆ ಹೌಸಿಗೆ ಹೋಗಬೇಕೆಂಬ ದೃಷ್ಟಿಯಿಂದ ಹಾಗೂ ಅಲ್ಲಿ ಅವರು ಕಾಯುತ್ತಿರುವುದರಿಂದ ನಾನು ಹೇಳಿದೆ. ಇದು ಅಲ್ಲಿ ಸರ್ಕ್ಯುಲೇಟ್ ಆಗಬೇಕಾಗಿದೆ. ಅದನ್ನು ಬಿಟ್ಟರೆ ಬೇರೇನೂ ಇಲ್ಲ. ಕುಡಿಗಲ್ ವಿಚಾರ ಮತ್ತೊಂದಕ್ಕೆ ಅಧ್ಯಕ್ಷರು ಏನು ಅನುಮತಿ ಕೊಡುತ್ತಾರೋ ಅದನ್ನು ಚರ್ಚೆಗೆ ತೆಗೆದುಕೊಳ್ಳಬಹುದು. We have no objection ಅದರ ಬಗ್ಗೆ ಚರ್ಚೆ ಮಾಡಿದರೆ ನಾನು ಉತ್ತರ ಕೊಡುತ್ತೇನೆ. ಇದನ್ನು ಮುಚ್ಚಬೇಕೆಂಬ ದೃಷ್ಟಿಯಿಂದ ಹೇಳಲಿಲ್ಲ ಇದು ಸಣ್ಣ ವಿಚಾರ. ಸಂವಿಧಾನದ ಅಬ್ಲಿಗೇಷನ್ ಇದು. ಇದನ್ನು ಬಿಟ್ಟರೆ ಬೇರೇನೂ ಇಲ್ಲ. ಮಾನ್ಯ ವಾಟಾಳ್‌ರವರು ಇದರ ಬಗ್ಗೆ ಚಕಾರ ಎತ್ತಲಾರರು ಎಂದು ನಾನು ಭಾವಿಸಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಗೈರು ಹಾಜರಿಯಲ್ಲಿ ಏಕೆ ಚರ್ಚೆ ಮಾಡುತ್ತೀರಿ, ನಮಗೂ ಅವಕಾಶ ಮಾಡಿಕೊಡಿ.

ಶ್ರೀ ಎಸ್. ಬಂಗಾರಪ್ಪ : ಇಷ್ಟರೊಳಗೆ ಇದು ಮುಗಿದುಹೋಗುತ್ತಿತ್ತು. ಏನಾದರೂ ಮಾಡಿ ನಿಮ್ಮನ್ನು ಬಿಟ್ಟು ಮಾಡಬೇಕೆಂದು ಅಲ್ಲ. It is not at all our intention.

ಶ್ರೀ ಸಿ. ಬೈರೇಗೌಡ : ನನ್ನ ಹತ್ತಿರ ಸಹ ಕೆಲವು ಅಂಕಿ ಅಂಶಗಳಿವೆ. 8 ಕೋಟಿ ರೂಪಾಯಿ ನೀವು ರೆಕ್ಟಿಫೈಡ್ ಸ್ಪಿರಿಟ್‌ನಲ್ಲಿ ಕೊಟ್ಟಿದ್ದೀರಿ. ಅದನ್ನು ಇಲ್ಲಿ ಪಾಸ್ ಮಾಡಿಕೊಂಡು ಆ ಹಣವನ್ನು ರೀ ಇಂಬರ್ಸ್ ಮಾಡಬೇಕೆಂಬ ಪ್ರಸ್ತಾಪವನ್ನು ಇಲ್ಲಿಟ್ಟಿದ್ದೀರಿ. ಇದರ ಬಗ್ಗೆ ನನ್ನ ಹತ್ತಿರ ಮಾಹಿತಿಗಳು ಇವೆ. ಇದು ಚರ್ಚೆಗೆ ಬರುತ್ತದೆಂದು ಗೊತ್ತಿದ್ದರೆ ನಾನು ಆ ಮಾಹಿತಿಗಳನ್ನು ಈ ಸದನಕ್ಕೆ ತರುತ್ತಿದ್ದು ಆಗ ಅರ್ಥಪೂರ್ಣವಾಗಿ ಇದರ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗುತ್ತಿತ್ತು ಹಾಗೂ ನಮ್ಮ ಭಾವನೆಗಳನ್ನು ಸರಕಾರದ ಮುಂದಿಡಲು ಸಾಧ್ಯವಾಗುತ್ತಿತ್ತು. ಈಗ ಇದನ್ನು ಕೊಟ್ಟು ಇದು ಅಲ್ಲಿಗೆ ಹೋಗಬೇಕೆಂದು ಹೇಳುತ್ತಿದ್ದೀರಿ. ನಿಮಗೇನೂ ತೊಂದರೆ ಇಲ್ಲವಲ್ಲ. ಕಾನ್‌ಸ್ಟಿಟ್ಯೂಷನ್ ಅಬ್ಲಿಗೇಷನ್ ಏನೂ ಇಲ್ಲ. 500 ಕೋಟಿ ರೂಪಾಯಿ ಹಣ ಇಟ್ಟುಕೊಂಡಿದ್ದೀರಿ. ಅದನ್ನು ರೀ-ಇಂಬರ್ಸ್ ಮಾಡತಕ್ಕಂಥಾದ್ದು ಅಷ್ಟೇ ಇರತಕ್ಕಂಥಾದ್ದು. 500 ಕೋಟಿ ರೂಪಾಯಿಗಳವರೆಗೂ ನೀವು ಹಣವನ್ನು ಖರ್ಚು ಮಾಡಬಹುದು. ಈ ಮನೆಯಲ್ಲಿ ಮತ ಹಾಕದೆ ಅಪ್ರೂವಲ್ ಇಲ್ಲದೆ ನೀವು 500 ಕೋಟಿ ರೂ.ವರೆಗೂ ಖರ್ಚು ಮಾಡತಕ್ಕಂತಹ ಅವಕಾಶ ಇದೆ. ಆದ್ದರಿಂದ ಇದೆಲ್ಲವನ್ನೂ ಗಮನಿಸಿ ಇನ್ನೂ 15 ದಿವಸ ಸದನವನ್ನು ವಿಸ್ತರಣೆ ಮಾಡಿ ಎಂದು ಮನವಿಯನ್ನು ಇಟ್ಟೆವು. ಅದಕ್ಕೂ ತಾವು ಒಪ್ಪಲಿಲ್ಲ. ಈಗ ಬಂದು ತಕ್ಷಣ ಒಪ್ಪಿಕೊಳ್ಳಬೇಕೆಂದು ಹೇಳಿದರೆ ಅದು ಸರಿಯಾಗುವುದಿಲ್ಲ. ತಮಗೆ ಬಹುಮತ ಇದೆ; ತಾವು ಪಾಸ್ ಮಾಡಿಕೊಳ್ಳಿ. ನಾವು ಈ ರಾಜ್ಯದ ಜನತೆಯ ಕ್ಷಮೆ ಕೋರಬೇಕಾಗುತ್ತದೆ. ನಾವಂತೂ ಈ ಚರ್ಚೆಯಲ್ಲಿ ಭಾಗವಹಿಸುವಂತಹ ಪರಿಸ್ಥಿತಿಯಲ್ಲಿ ಇವತ್ತಿನ ದಿವಸ ಇಲ್ಲ. ಜನ ನಮ್ಮನ್ನು ತಪ್ಪು ತಿಳಿದುಕೊಳ್ಳುತ್ತಾರೆ. ಬಡ್ಜೆಟ್ ಸೆಷನ್‌ನಲ್ಲಿ ಬಾಯ್‌ಕಾಟ್ ಮಾಡಿದರು, ಪೂರಕ ಬೇಡಿಕೆಗೆ ಈಗಲೂ ವಿರೋಧ ಮಾಡುವುದಕ್ಕೆ ಹೊರಟರೆಂಬ ಭಾವನೆ ರಾಜ್ಯದ ಜನತೆಯಲ್ಲಿ ಮೂಡುತ್ತದೆ. ನಮ್ಮ ಕರ್ತವ್ಯವನ್ನು ಸರಿಯಾದಂತಹ ರೀತಿಯಲ್ಲಿ ನಾವು ನಿರ್ವಹಿಸಲಿಲ್ಲವೆನ್ನತಕ್ಕಂತಹ ಭಾವನೆ ನಮಗೂ ಕೂಡ ಬರುತ್ತದೆ. ನಮ್ಮ ಭಾವನೆಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತೇವೆಂದರೆ, ನಿಮಗೆ ಬಹುಮತ ಇದೆ; ನಡೆದುಕೊಳ್ಳಿ ಸಾರ್.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಏತಕ್ಕಾಗಿ ಕಂಟಿನ್‌ಜೆನ್ಸಿ ವಿಚಾರದಲ್ಲಿ ಲೇಟಾಗಿ ತರತಕ್ಕಂಥ ವಿಚಾರದಲ್ಲಿ ತಡ ಮಾಡಬಾರದೆಂದರೆ, we have got special attention as far as contingency fund is concerned ಎಂಬುದನ್ನು ತಾವು ಒಪ್ಪುತ್ತೀರೆಂಬುದು ನನ್ನ ಭಾವನೆ. Though it is enchanced we should not very often tap it and make use of it. ಎನ್ನತಕ್ಕಂಥ ಅಭಿಪ್ರಾಯವನ್ನು ನಾವು ಇಟ್ಟುಕೊಂಡಿದ್ದೇವೆ. And whatever we do, better we bring it to the kind notice of this august House, ಎನ್ನತಕ್ಕಂಥ ದೃಷ್ಟಿಯಿಂದ ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ. ನಾವು ನಿಧಾನವಾಗಿ ತಂದರೆ ಏನಾಗುತ್ತದೆ, ಅದರ ಮೇಲೆ ಸಾಕಷ್ಟು ಪ್ರಮಾಣದಲ್ಲಿ ಟೀಕೆ–ಟಿಪ್ಪಣಿಗಳನ್ನು ಮಾಡುವುದಕ್ಕೆ ನೀವೇ ಇರಬಹುದು ಅಥವಾ ಈ ಕಡೆಯವರು ಇರಬಹುದು, ಅದನ್ನು ಮಾಡುವುದಕ್ಕೆ ನಾಳೆ ಆಸ್ಪದವಾಗುತ್ತದೆ, ಅದಾಗಬಾರದೆಂದು ಹೇಳಿ, I, as the Finance Minister directed our Officers to prepare it and said let us present this as early as possible and then bring it befor the august House ಎನ್ನತಕ್ಕಂಥಾದ್ದನ್ನು ಬಿಟ್ಟರೆ ಇದರ ಉದ್ದೇಶ ಇನ್ನೇನೂ ಇಲ್ಲ. ಆ ದೃಷ್ಟಿಯಿಂದ ನೀವು ಅಪ್ರೀಷಿಯೇಟ್ ಮಾಡಬೇಕಾಗಿತ್ತು. ನೀವು ಚರ್ಚೆ ಮಾಡುವುದು ಬೇಡವೆಂದು ನಾನು ಹೇಳಲಿಲ್ಲ. ಆ ದೃಷ್ಟಿಯಿಂದ ಹೇಳಿದ್ದು. ಇದರಲ್ಲಿ ಹೆಚ್ಚಿನ ವಿಚಾರವಿಲ್ಲ. ನಾವು ಎಷ್ಟೋ ಸಾರಿ ಆ ರೀತಿ ಮಾಡಿಕೊಂಡು ಹೋಗಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಇಲ್ಲಿ ಒಂದು ಸಂದರ್ಭದಲ್ಲಿ ತಾವು ಏನು ಇಟ್ಟಿದ್ದೀರಿ, ಸಾರಾಯಿ ಉತ್ಪಾದನೆಗೆ ಬೇಕಾದಂಥ ರೆಕ್ಟಿಫೈಡ್ ಸ್ಪಿರಿಟ್ ಬೆಲೆ ಹೆಚ್ಚಿಸಿ ಆ ಬಾಟ್ಲಿಂಗ್ ಘಟಕಗಳಿಗೆ ರೆಕ್ಟಿಫೈಡ್ ಸ್ಪಿರಿಟ್ ಪೂರೈಕೆ ಮಾಡುವಂತಹ ಡಿಸ್ಟಿಲರಿಗಳಿಗೆ ಅನುಕೂಲವಾಗಲಿ ಎಂಬ ಆ ಹಿನ್ನೆಲೆಯಲ್ಲಿ 8 ಕೋಟಿ ಕೊಡುತ್ತಿದ್ದೀರಿ, ಈ ಬಗ್ಗೆ ನಮ್ಮಲ್ಲಿ ದಾಖಲೆಗಳಿವೆ. ಇದು ನಿಜಕ್ಕೂ ಸಹಿತ ಮೇಲ್ನೋಟಕ್ಕೆ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳತಕ್ಕಂಥದ್ದು. ಸರ್ಕಾರ ಎಂಟು ಕೋಟಿರೂಪಾಯಿಗಳನ್ನು ಕೊಟ್ಟಂತೆ ಮಾಡಿ ಇದರಲ್ಲಿ ಸಾಕಷ್ಟು ದೊಡ್ಡ ಅವ್ಯವಹಾರ ನಡೆದಿದೆ ಎನ್ನುವ ಆರೋಪ ಇದೆ. ಜನ ಆ ರೀತಿ ಮಾತನಾಡುತ್ತಿದ್ದಾರೆ. ನಮ್ಮ ಹತ್ತಿರ ಅದಕ್ಕೆಲ್ಲಾ ಬೇಕಾದಷ್ಟು ದಾಖಲೆಗಳಿದ್ದಾವೆ. ಅದನ್ನು ಕೊಟ್ಟಂತೆ ಮಾಡಿ ಸರ್ಕಾರ ವಾಪಸ್ಸು ಪಡೆದಿದೆ, ದೊಡ್ಡ ಭ್ರಷ್ಟಾಚಾರ ನಡೆದಿದೆ ಎನ್ನುವ ಮಾತುಗಳು ಕೇಳಿಬಂದಿವೆ. ಈ ಮಹತ್ವವಾದಂಥ ಆರೋಪಕ್ಕೆ ಈ ಸರ್ಕಾರ ಗುರಿಯಾಗಬಾರದು, ಇದರ ಬಗ್ಗೆ ಚರ್ಚೆ ಮಾಡೋಣ, ಇದರ ಜೊತೆಗೆ ನೀವು ಆ ಒಂದು ಕಂಪ್ಯೂಟರನ್ನು ಖರೀದಿ ಮಾಡಲು 5 ಕೋಟಿ 27 ಲಕ್ಷ ರೂಪಾಯಿ ಕೊಟ್ಟಿದ್ದು, ಈ ಎರಡು ವ್ಯವಹಾರಗಳ ಬಗ್ಗೆ ನಿಮ್ಮ ಸರ್ಕಾರದ ಮೇಲೆ ದೊಡ್ಡ ಆರೋಪಗಳು ಇದ್ದಾವೆ. ಈ ಒಂದು ಭ್ರಷ್ಟಾಚಾರಕ್ಕೆ ಇದು ಒಂದು ದೊಡ್ಡ ನಾಂದಿಯಾಗಿದೆ ಎಂದು ಜನ ಮಾತನಾಡುತ್ತಿರುವುದರಿಂದ ಅದಕ್ಕೆಲ್ಲಾ ವಿವರಗಳನ್ನು ಒದಗಿಸಿ ಚರ್ಚೆ ಮಾಡಿ ನಿಮ್ಮ ಸರ್ಕಾರದ ಮೇಲೆ ಇರುವಂಥ, ಜನ ಮಾತನಾಡುವಂಥ ಅಪಾದನೆಯಿಂದ ನೀವು ಮುಕ್ತರಾಗಬೇಕಾಗಿದೆ. ಅದಕ್ಕೋಸ್ಕರ ನಿಮ್ಮ ದೃಷ್ಟಿಯಿಂದಲಾದರೂ ಇದನ್ನು ವಿಸ್ತರಣೆ ಮಾಡಿ. ಚರ್ಚೆಗೆ ಅವಕಾಶ ಮಾಡಿಕೊಡಿ, ಚರ್ಚೆ ಮಾಡೋಣ. ನಮಗೆ ಕನ್‌ವಿನ್ಸ್ ಮಾಡಿ. ಈ 8 ಕೋಟಿ ಅವ್ಯವಹಾರ ನಡೆದಿಲ್ಲ, ಶ್ರಾಮಾಣಿಕವಾಗಿ ನಾವು ಕೊಟ್ಟಿದ್ದೇವೆಂದು ಹೇಳುತ್ತೀರಿ. ಏತಕ್ಕೆಂದರೆ ಇಷ್ಟೊಂದು ದೊಡ್ಡ ಅಮೌಂಟನ್ನು ಸಾದಿಲ್ವಾರು ಖರ್ಚು ಎಂದು ತಾವು ಕೊಟ್ಟಿದ್ದೀರಿ. ಇದು ಸಣ್ಣ ವಿಷಯವಲ್ಲ. ಒಂದು ಅಭಿವೃದ್ಧಿ ಕಾರ್ಯಕ್ರಮಕ್ಕೆ ಅಲ್ಪಸ್ವಲ್ಪ ಹಣ ಬಿಡುಗಡೆ ಮಾಡುವುದಕ್ಕಾಗದೆ ಇಡತಕ್ಕಂಥ ಸಂದರ್ಭದಲ್ಲಿ ಇದರಲ್ಲಿ ಆಸಕ್ತಿ ವಹಿಸಿ ಇದನ್ನು ಮಾಡಿರುವುದರಿಂದ ದೊಡ್ಡ ಅವ್ಯವಹಾರ ನಡೆದಿದೆ ಎನ್ನುವ ಮಾತನ್ನು ಜನರು ಆಡುತ್ತಾರೆ. ಅದಕ್ಕೋಸ್ಕರವಾಗಿ ಇದರ ಬಗ್ಗೆ ಚರ್ಚೆಯಾಗಲಿ. ನಾವು ಒಪ್ಪುತ್ತೇವೆ. ಆದಕ್ಕಾಗಿ ನಾವು ಬಂದಿರುವುದು. ಯಾವ ಕಾರಣಕ್ಕೂ ಸಹ ಚರ್ಚೆ ಇಲ್ಲದ ಒಪ್ಪಬೇಕೆಂದರೆ ನಾವು ಚರ್ಚೆಯಲ್ಲಿ ಭಾಗವಹಿಸಲು ಸಾಧ್ಯವಿಲ್ಲ ಸ್ವಾಮಿ; ತಾವು ಇಷ್ಟಾದರೂ

ಪಠಮಾಡಿ ಬಹುಮತ ಇದೆ ಎಂದು ಮುಂದುವರಿಸಿಕೊಂಡು ಹೋಗುವುದಾದರೆ ತಾವು ಅನಿವಾರ್ಯವಾಗಿ ನಾವೆಲ್ಲಾ ಹೊರಗಡೆ ಹೋಗಬೇಕಾಗುತ್ತದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಒಂದು ನಿಮಿಷ ಅವಕಾಶ ಕೊಟ್ಟರೆ ನನಗೆ ಗೊತ್ತಿರುವಂಥ ವಿಷಯವನ್ನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಸ್ವಲ್ಪ ತಾಳಿ, ಈ ಮಾನ್ಯ ಬೈರೇಗೌಡರು ಹೇಳಿದರಲ್ಲಿ ಸ್ವಲ್ಪ ತಪ್ಪಿದೆ. ಇದರಲ್ಲಿ, I think you said Rs. 500 crores. I could not hear him. ಅದು 500 ಕೋಟಿ ರೂಪಾಯಿ ಎನ್ನತಕ್ಕಂಥ ಮಾತನ್ನು ಹೇಳಿದರು. ನೋ ನೋ ಕಂಟಿನ್‌ಜೆನ್ಸಿ ಫಂಡ್ 500 ಕೋಟಿ ರೂಪಾಯಿಗಳೆಂದು ನೀವು ಹೇಳಿದಿರಿ. ನಾನು ಸರಿಯಾಗಿ ಕೇಳಲಿಲ್ಲ. Iam sorry, ಅದು 500 ಕೋಟಿ ರೂಪಾಯಿಗಳಲ್ಲ. ತಾವು ತಪ್ಪಾಗಿ ತಿಳಿದುಕೊಂಡಿರುತ್ತೀರಿ. ಅಕ್ಚುಯಲಿ ಸ್ಟೇಟ್ ಲೆಜಿಸ್ಲೇಚರ್ ಅಪ್ರೂವಲ್ ಮಾಡಿರತಕ್ಕಂಥದ್ದು 80 ಕೋಟಿ. State Legislature approved Rs. 80 crores. We have already spent about Rs. 65 crores. Because it is the beginning of the year, that has necessitated us to present this before the august House.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಮುಖ್ಯಮಂತ್ರಿಗಳು ಏತಕ್ಕೆ ಅವಸರ ಮಾಡುತ್ತಿದ್ದಾರೆಂಬುದು ಗೊತ್ತಿಲ್ಲ. ಇದು ಗೊತ್ತಿದ್ದ ವಿಚಾರ, ಮೇಲ್ಮನೆಯಲ್ಲಿ ಇವತ್ತು ಆಗುವುದಿಲ್ಲವೆಂದು ಹೇಳಿದ್ದಾರೆ. ನಾಳೆ ಅದರ ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ. ಆದರೂ ಇವತ್ತೇ ಏತಕ್ಕೆ ಅವಸರ ಮಾಡುತ್ತಾರೆಂದು ನನಗೆ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ : ಮೇಲ್ಮನೆಯವರು ಕೂಡ ಇಲ್ಲಿ ಪಾಸ್ ಮಾಡುವ ದೃಷ್ಟಿಯಿಂದ ಕಾಯುತ್ತಿದ್ದಾರೆ. ತಾವು ಒಂದೊಂದು ಸಾರಿ ಇರುವುದಿಲ್ಲ, ಅದೇ ನಮಗೆ ಬಹಳ ತಾಪತ್ರಯವಾಗಿದೆ. ಆದುದರಿಂದ, ತಮ್ಮ ಅನುಮತಿ ಪಡೆದು ನಾನು ಇದನ್ನು ಚರ್ಚೆಗೋಸ್ಕರ ಇಡುತ್ತಿದ್ದೇನೆ ಚರ್ಚೆಯ ಬಗ್ಗೆ ಒಂದೇ ಮಾತು....

ಶ್ರೀ ಸಿ. ಬೈರೇಗೌಡ : ಈ ಸದನದಲ್ಲಿ ಕುಳಿತು ಬಹಳ ಪರಿಣಾಮಕಾರಿಯಾಗಿ ಈ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಇದ್ದೆ.....

ಶ್ರೀ ಎಸ್. ಬಂಗಾರಪ್ಪ : ಬೇರೆ ಉದ್ದೇಶ ಇಟ್ಟು ಮಾಡಬೇಕೆಂದರೆ ಮಾಡಿ ನಾನು ಏನು ಮಾಡಲಿ.....

(ಗೊಂದಲ)

ಶ್ರೀ ಸಿ. ಬೈರೇಗೌಡ : ರಕ್ಷಿಪೈಡ್ ಸ್ಪಿರಿಟ್‌ನಲ್ಲಿ 8 ಕೋಟಿ ರೂಪಾಯಿ ಕೊಡುವುದಕ್ಕೆ ಹೊರಟಿದ್ದಾರೆ. ಬಾಟ್ಲಿಂಗ್ ಚಾರ್ಜಸ್ ಜಾಸ್ತಿ ಮಾಡಿದ್ದಾರೆ. ಸರ್ಕಾರದ ಬೊಕ್ಕಸದ ಹಣವನ್ನು ಲೂಟಿ ಮಾಡುತ್ತಿದ್ದರೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲದಿದ್ದರೆ ಹೇಗೆ?

ಉಪಾಧ್ಯಕ್ಷಿಣಿಯವರು : ಇಷ್ಟು ಹೊತ್ತಿಗೆ 4–5 ಜನ ಮಾತನಾಡಬಹುದಾಗಿತ್ತು. ಚರ್ಚೆಯಾದರೂ ಪ್ರಾರಂಭ ಮಾಡಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಈ ಸರ್ಕಾರವನ್ನು ಸಾರಾಯಿ ಸರ್ಕಾರ ಎಂದು ಕರೆಯುತ್ತಿದ್ದಾರೆ. ಅದಕ್ಕೆ 8 ಕೋಟಿ ರೂಪಾಯಿ ಸರ್ಕಾರದ ಬೊಕ್ಕಸದಿಂದ ಪಾವತಿಯಾಗುತ್ತಿದೆ. 8 ಕೋಟಿ ರೂಪಾಯಿಗಳನ್ನು ಕೊಡುತ್ತಿರುವಾಗ ನಾವು ಇದರಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಿಲ್ಲ. ಸರ್ಕಾರದ ಬೊಕ್ಕಸದಿಂದ ಹಣ ಸೋರಿ ಹೋಗುತ್ತಿದೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಇದು ನಮಗೆ ಇಷ್ಟವಿಲ್ಲದಿದ್ದರೆ ಅನಿವಾರ್ಯವಾಗಿ ಹೊರಗಡೆ ಹೋಗಬೇಕಾಗುತ್ತದೆ.

(ಗೊಂದಲ)

(ಬಿ.ಜೆ.ಪಿ. ಮಾನ್ಯ ಸದಸ್ಯರು, ಶ್ರೀ ಬೈರೇಗೌಡರು, ಶ್ರೀ ವಾಟಾಳ್ ನಾಗರಾಜ್ ಅವರು ಈ ಸಂದರ್ಭದಲ್ಲಿ ಸಭಾತ್ಯಾಗ ಮಾಡಿದರು)

ಶ್ರೀ ಎಸ್. ಬಂಗಾರಪ್ಪ : ಪೂರಕ ಅಂದಾಜುಗಳಲ್ಲಿ ಒದಗಿಸಲು 117.93 ಕೋಟಿ ರೂಪಾಯಿಗಳಲ್ಲಿ 18.83 ಕೋಟಿ ರೂಪಾಯಿಗಳು ಕೇಂದ್ರ ಸಹಾಯಕ್ಕೆ ಸಂಬಂಧಿಸಿದೆ, ಮತ್ತು 0.10 ಕೋಟಿ ರೂಪಾಯಿಗಳು ಲೆಕ್ಕ ಹೊಂದಾಣಿಕೆಗೆ ಸಂಬಂಧಿಸಿದೆ. ಸಾಮಾನ್ಯ ರಾಜಸ್ವದಿಂದ ಹೊರಹೋಗುವ ನಿವ್ವಳ ಮೊತ್ತ 99.53 ಕೋಟಿ ರೂಪಾಯಿಗಳು ಮಾತ್ರ. ಈ ವಿವರಗಳನ್ನು ಸಂಪೂರ್ಣವಾಗಿ ನಾವು ಇದರಲ್ಲಿರತಕ್ಕ ಪೂರ್ತಾ ಅಂದಾಜುಗಳಲ್ಲಿ ಕೊಟ್ಟಿದ್ದೇನೆ. ಇದರಲ್ಲಿ ನಾನು ಹೇಳಿರತಕ್ಕ ವಿಚಾರಗಳು ಇವೆ ಏತಕ್ಕಾಗಿ ವಿವರಣೆಗಳು, ಹೇಗೆ ಸಂವಿಧಾನಬದ್ಧ ಕಾರ್ಯಕ್ರಮ ಎಂದು ಹೇಳಿದ್ದೇನೆ. ಅದುದರಿಂದ ಇದಕ್ಕೆ ಒಪ್ಪಿಗೆ ಕೊಡಬೇಕೆಂಬ ಬೇಡಿಕೆಯನ್ನು ಮಂಡನೆ ಮಾಡುತ್ತಿದ್ದೇನೆ. ಇದರಲ್ಲಿ ಬೇರೆ ವಿಚಾರಗಳೇನು ಇಲ್ಲ. ಆ ವಿವರಗಳನ್ನು ಈ ಪುಸ್ತಕದ ಒಂದನೇ ಪುಟದಲ್ಲಿ 91–92ರ ಮೊದಲನೇ ಕಂತು ಎಂಬ ಶೀರ್ಷಿಕೆ ಅಡಿಯಲ್ಲಿ ತಿಳಿಸಿದ್ದೇವೆ. ಅದರ ಆದ್ಯ ಕರ್ತವ್ಯ ಸರ್ಕಾರದ ಮೇಲೆ ಇದೆ. ಆರ್ಥಿಕ ವಿಚಾರಗಳನ್ನು ಆದಷ್ಟು ಬೇಗ ಸದನದ ಮುಂದೆ ಇರಬೇಕು. ಸದನ ಸೇರಿದಾಗ ಸದನದ ಗಮನಕ್ಕೆ ತರದಿದ್ದರೆ ನಮ್ಮ ಕರ್ತವ್ಯದಲ್ಲಿ ಲೋಪ ಬಂದೀತು ಎಂದು ಇದರ ಬಗ್ಗೆ ಆದೇಶ ಕೊಟ್ಟು ಸದನದ ಮುಂದೆ ತರಬೇಕೆಂಬ ಕರ್ತವ್ಯ ನಿರ್ವಹಣೆ ದೃಷ್ಟಿಯಿಂದ ತಂದಿದ್ದೇವೆ. ಇದು ಮಾನ್ಯ ವಿರೋಧ ಪಕ್ಷದ ಮಿತ್ರರಿಗೆ ಹಿಡಿಸದಿದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಅವರು ಹೇಳಿರತಕ್ಕ ಮಾತುಗಳು ಸ್ವಲ್ಪ ಆಧಾರರಹಿತವಾದವು. ಕಳೆದ ಸಾರಿ ಬಡ್ಜೆಟ್ ವಿಚಾರವನ್ನು ಮಾತನಾಡಿದರು. ಬಡ್ಜೆಟ್ ವಿಚಾರ ಬಂದಾಗ ಬಹಿಷ್ಕಾರ ಹಾಕಿ ಚರ್ಚೆಯಲ್ಲಿ ಪಾಲ್ಗೊಳ್ಳದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡರು. ಅದು ಅಪರಾಧ ಎಂಬ ವಿಚಾರ ಮನಸ್ಸಿಗೆ ಬಂದಿದ್ದರೆ ಅದು ಅವರ ತಿಳಿವಳಿಕೆಗೆ ಬಿಟ್ಟಿರತಕ್ಕ ವಿಚಾರ. ನಾನು ಏನೂ ಹೇಳಲಾರೆ. ಸರ್ಕಾರದ ಕರ್ತವ್ಯ ಮಾಡಬೇಕು, ಮಾಡುತ್ತಿದ್ದೇನೆ. ಬಹುಮತ, ಅಲ್ಪಮತ ಎಂಬುದು ಅಲ್ಲ. ಸಂವಿಧಾನದ ಪ್ರಕಾರ ಕರ್ತವ್ಯ ನಿರ್ವಹಣೆ ಮಾಡಬೇಕಾಗಿದೆ. ಇಷ್ಟು ಮಾತು ಹೇಳಿ ಈ ಪೂರಕ ಅಂದಾಜುಗಳಿಗೆ ಈ ಸದನ ಒಪ್ಪಿಗೆ ಕೊಡಬೇಕೆಂಬ ದೃಷ್ಟಿಯಿಂದ ತಮ್ಮ ಅನುಮತಿ ಕೇಳುತ್ತಿದ್ದೇನೆ.

ಶ್ರೀ ಕೆ.ಎಚ್. ರಂಗನಾಥ್ (ಹಿರಿಯೂರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಅವಸರ ಮಾಡಿದರು. ಸ್ವಲ್ಪ ತಡೆದಿದ್ದರೆ ಚೆನ್ನಾಗಿತ್ತೋ ಏನೋ ಎಂದು ನನ್ನ ಒಂದು ಅಭಿಪ್ರಾಯ. ಈ ಮಂಡನೆ ಮಾಡಿದ್ದಾರೆ. 117 ಕೋಟಿ 93 ಲಕ್ಷ ರೂಪಾಯಿಗೆ ಸಪ್ಲಿಮೆಂಟರಿ ಡಿಮ್ಯಾಂಡ್ ನಮ್ಮ ಮುಂದೆ ಇದೆ. ಇದು ಕೂಡ ಈಗತಾನೇ ನಮ್ಮ ಕೈಯ್ಯಲ್ಲಿ ಕೊಟ್ಟಿದ್ದಾರೆ. ನಾನು ಕೌಲ್ ಅಂಡ್ ಶಕ್ಧರ್ ನೋಡುತ್ತಿದ್ದೆ According to them :

"If the amount authorized to be expended for a particular service for the current financial year is found to be insufficient for the purposes of that year or when a need has arisen during the current financial year for supplementary or additional expenditure upon some new service not contemplated if the Budget for that year....."

ಮಾಡಬಹುದು, ಖರ್ಚು ಮಾಡಬಹುದು, ಈ ಸಭೆಯ ಮುಂದೆ ತಂದು ಮಾಡಬೇಕು ಎಂದು ಇದೆ. ಫೈನಾನ್ಸ್ ಡಿಪಾರ್ಟ್‌ಮೆಂಟ್ ಕಾರ್ಯ ನಾವು ನೋಡುವಾಗ ಇದು ಸರಿಯಾಗಿ ಕೆಲಸ ಮಾಡುವುದಿಲ್ಲ ಎನ್ನಿಸುತ್ತದೆ. ಇಂಟ್ರೊಡಕ್ಟರಿ ನೋಟನ್ನು ತಾವು ಗಮನಿಸಿದರೆ In accordance with the afore said provisions. ಎಂದು ಹೇಳುತ್ತಾ These Estimates relate to :

"Advances sanctioned from the Contingency Fund to covr expenditure on "New Service" during 1991-92 after the Supplementary Estimates 1991-92 were placed before the Legislature during March 1992."

ಮೊನ್ನೆತಾನೆ ಮಾರ್ಚಿಯಲ್ಲಿ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಬಂತು. ಆದರೂ ಕೂಡ ಗಮನಿಸಲಿಲ್ಲ, ಈಗ ಮತ್ತೆ ಬಂದಿದೆ, ಇದರಲ್ಲಿ ಇಟ್ಟಿದ್ದೇವೆ ಎಂಬ ಮಾತನ್ನು ಹೇಳುತ್ತಾರೆ. ಹೀಗೆ ಅವರ ನೋಟ್ಸ್‌ನಲ್ಲಿ ಹೇಳುತ್ತಾರೆ. ಇದನ್ನು ನಾವು ನೋಡುವಾಗ ಸ್ವಲ್ಪ ಅಸಂತೋಷವಾಗುತ್ತದೆ. ಈ ಸಭೆಯನ್ನು ಬಹಳ ಗಂಭೀರವಾಗಿ ಈ ಇಲಾಖೆ ತೆಗೆದುಕೊಂಡಿಲ್ಲ, ಗಮನಿಸುತ್ತಾ ಇಲ್ಲ, ಬಹಳ ಲಘುವಾಗಿ ಈ

ಸಭೆಯನ್ನು ತೆಗೆದುಕೊಳ್ಳುತ್ತಿದೆ ಎಂದು ನನ್ನ ಭಾವನೆ. ಮತ್ತೆ ಖರ್ಚಿನಲ್ಲಿ ನೋಡುವಾಗ ಎಕ್ಸೈಸ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಂತೆ 8 ಕೋಟಿ ರೂಪಾಯಿಗಳನ್ನು ತಾವು ಕೇಳಿದ್ದೀರಿ. ಅದರಲ್ಲಿ ನ್ಯೂ ಸರ್ವೀಸಸ್ ಹೇಗಾಯಿತು? "The price of Rectified Spirit supplied by both captive and non-captive distilleries for manufacture of "Arrack" have been ennanced" ಎಂದು ಹೇಳಿದ್ದೀರಿ. ಯಾವಾಗಿನಿಂದ ? Is it to give effect from 1-7-92? ಹಾಗಾದರೆ ಮೊನ್ನೆ ಬಜೆಟ್‌ನಲ್ಲಿ ನಾವು ಅದನ್ನು ಮಾಡಬಹುದಾಗಿತ್ತು. Further, "Consequent on this revision, an estimated expenditure of Rs. 8.00 crores has to be incurred towards payment of differential cost to various distilleries who have supplied the Rectified spirit to the Arrack Bottling Units" ಎಂದು ಹೇಳಿದರೆ ಈಗಾಗಲೇ ಇದನ್ನು ಅರಾಕ್‌ಗೆ ರೆಕ್ಟಿಫೈಡ್ ಸ್ಪಿರಿಟ್ಟನ್ನು ಏನು ಸಪ್ಲೈ ಮಾಡಿದ್ದಾರೆ ಅವರಿಗೆ ಏನಾನ್ಸ್ ರೇಟನ್ನು ಕೊಟ್ಟಿದೆ ಎಂದು ಅರ್ಥವಾಗುತ್ತದೆ. ಅದು ನ್ಯೂ ಸರ್ವೀಸಸ್ ಹೇಗಾಗುತ್ತದೆ? Enhanced rate must have been given retrospectively. ರೆಟ್ರಾಸ್ಪೆಕ್ಟೀವಾಗಿ ಕೊಟ್ಟಿದ್ದರೆ ಯಾವ ವರ್ಷದಿಂದ ಕೊಟ್ಟಿದ್ದೀರಿ? ಎಷ್ಟು ಹಣ ಕೊಟ್ಟಿದ್ದೀರಿ? ಯಾವ ತಾರೀಖಿನಲ್ಲಿ ಕೊಟ್ಟಿದ್ದೀರಿ. ಇದನ್ನು ಈ ಸಭೆಗೆ ವಿವರಿಸಬೇಕಾಗುತ್ತದೆ. "There is no provision in the budget for this purpose. Hence the amount has been released from Contigency Find. An equal sum is now required for repayment to the fund" ಎಂದು ತಾವು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಆದ್ದರಿಂದ it is a very serious lapse also. ಏಕೆಂದರೆ ಯಾವ ವರ್ಷದಿಂದ ಕೊಟ್ಟಿದೆ ಏನು ಎಂದು ನಮ್ಮ ಸಭೆಯ ಮುಂದೆ ವಿವರ ಇಲ್ಲ. ಒಂದು ವೇಳೆ ಹೋದ ವರ್ಷವೇ ಕೊಟ್ಟಿದ್ದರೆ ಹೋದ ವರ್ಷ ನಾವು ಬಜೆಟ್ ಪಾಸ್ ಮಾಡಿದ್ದೇವೆ. ಅಪ್ರೋಪ್ರಿಯೇಷನ್ ಆಕ್ಟ್ ಆಗಿದೆ. ಖರ್ಚು ಆದರ ಪ್ರಕಾರ ಮಾಡಬೇಕಾಗುತ್ತದೆ. ಹೆಚ್ಚು ಕೊಡುವುದಕ್ಕೆ ಬರುವುದಿಲ್ಲ. ಮತ್ತೆ ಇನ್ನೊಂದು ಅಂಶ ಏನೆಂದರೆ ಸರ್ಕಾರದ ಡಿಸ್ಟಿಲರೀಸ್ ಯಾವುದೂ ಇಲ್ಲ. ನಾವು ಬೇರೆ ಡಿಸ್ಟಿಲರೀಸ್ ಓವರ್ಸ್‌ನಿಂದ ರೆಕ್ಟಿಫೈಡ್ ಸ್ಪಿರಿಟ್ಟನ್ನು ಕೊಂಡುಕೊಳ್ಳುತ್ತೇವೆ. ಬಾಟ್ಲಿಂಗ್ ಯೂನಿಟ್‌ಗಳಿಗೆ ಕೊಡುತ್ತೇವೆ. ಅದು ದುಡ್ಡು ಕೊಟ್ಟು ಕೊಂಡುಕೊಂಡು ಬರಬೇಕಾಗುತ್ತದೆ. ಬಾಟ್ಲಿಂಗ್ ಯೂನಿಟ್ ಮಾಡಿ ಕಂಟ್ರಾಕ್ಟರ್‌ಗೆ ಮಾರುತ್ತೇವೆ. ತದನಂತರ ಅವರು ಬಳಕೆದಾರರಿಗೆ ಮಾರುತ್ತಾರೆ.

Therefore, he has to collect it, he has to pay to the distilleries and he collects it from the consumers. ಆದುದರಿಂದ ನೇರವಾಗಿ ಸರ್ಕಾರದಿಂದ ಕೊಡತಕ್ಕ ಪರಿಸ್ಥಿತಿ ಒದಗುವುದಿಲ್ಲ. Supposing for the argument sake you enhance the price of the rectified spirit from this year, from 1st July, 1992. ಅವನಿಗೆ ನೀವು ಸರ್ಕಾರದಿಂದ ಆರ್ಡರ್‌ಗೆ ಮಾಡುತ್ತೀರಿ. ಹೆಚ್ಚು ದುಡ್ಡನ್ನು ಅಲ್ಲಿಂದ ಕೊಡುತ್ತಾರೆ. ತೆಗೆದುಕೊಂಡು ಬರುತ್ತಾನೆ. ಬಾಟ್ಲಿಂಗ್‌ನಲ್ಲಿ ಅದನ್ನು ಬ್ಲೆಂಡ್ ಮಾಡುತ್ತಾನೆ. ಅರ್ಯಾಕ್ ಮಾಡಿ ಮಾರಾಟ ಮಾಡುತ್ತಾನೆ. ಕನ್‌ಸೂಮರ್ಸ್‌ರಿಂದ ಕಲೆಕ್ಟ್ ಮಾಡುತ್ತಾನೆ. ಆದರೆ ಇಲ್ಲಿ ಏನಾಯಿತು? ರೆಟ್ರಾಸ್‌ಪೆಕ್ಟೀವ್ ಆಗಿ ಕೊಟ್ಟಿದ್ದರೆ ಯಾವ ವರ್ಷದಿಂದ ಕೊಟ್ಟಿದ್ದೀರಿ, ಯಾವ ತಾರೀಖಿನಿಂದ ಕೊಟ್ಟಿದ್ದೀರಿ.? ಇದು ನ್ಯೂ ಸರ್ವೀಸಸ್ ಹೇಗಾಗುತ್ತದೆ? ವಿತ್ತ ಇಲಾಖೆ ಬಗ್ಗೆ ನಾನು ಹೇಳುವುದಾದರೆ they have been misusing the provisions of the Constitution. ಈ ಇಲಾಖೆಯವರು ಈ ಮನೆಗೆ ಅಪರಾಧ ಮಾಡುತ್ತಿದ್ದಾರೆ. ಗೊತ್ತಿದ್ದೋ, ಇಲ್ಲದೆಯೋ ನಾವು ಅದಕ್ಕೆ ಒಪ್ಪಿಗೆ ಕೊಟ್ಟರೆ ತಪ್ಪು ಮಾಡಿದ ಹಾಗೆ ಆಗುತ್ತದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರೇ ವಿತ್ತ ಮಂತ್ರಗಳು ಆಗಿರುವುದರಿಂದ ಅದನ್ನು ತಿಳಿಸಬೇಕೆಂದು ನಾನು ಅವರಲ್ಲಿ ಮನವಿ ಮಾಡುತ್ತಿದ್ದೇನೆ. ಈ ರಾಜ್ಯದ ಬಡ್ಜೆಟ್ಟನ್ನು ನಾವು ಮೊನ್ನೆ ತಾನೇ ಒಪ್ಪಿಕೊಂಡಿದ್ದೇವೆ. ಸಪ್ಲಿಮೆಂಟರಿ ಬಡ್ಜೆಟ್‌ಗೆ ಒಪ್ಪಿಗೆ ಕೊಟ್ಟಿದ್ದೇವೆ. ನ್ಯೂ ಸರ್ವೀಸಸ್ ಎಂದು

ಹೇಳಿ ಮತ್ತೆ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಡಿಮಾಂಡ್ಸ್ ತಂದಿದ್ದೀರೆಂದರೆ ಬಹಳ ಮಟ್ಟಿಗೆ ವಿತ್ತ ಇಲಾಖೆ ಏನಿದೆ ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಮಾತನ್ನು ನಾನು ವಿಷಾದದಿಂದ ಹೇಳಬೇಕಾಗುತ್ತದೆ. ಮತ್ತೊಂದು ವಿಷಯ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿದ್ದರು. ಅದು ಕಂಪ್ಯೂಟರ್ ವಿಷಯ. ಈ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಈ ಬಗ್ಗೆ ನನಗೂ ಒಂದು ಕಾಗದ ಬಂದಿದೆ. ಏಕೆಂದರೆ ಕಂಪ್ಯೂಟರ್ ವಿಚಾರ ಹೇಳುವಾಗ ಇಂತಹ ವಿಚಾರ ತಮ್ಮ ಗಮನಕ್ಕೆ ಬಾರದೇ ಇಂತಹದ್ದು ನಡೆಯಲಿಕ್ಕೂ ಸಾಧ್ಯ ಇರುತ್ತದೆ. ಅಧಿಕಾರಿಗಳು ರುಜು ಮಾಡಿಸಿರುವುದೂ ಸಾಧ್ಯ ಇದೆ. ನನಗೆ ಒಂದು ಕಾಗದ ಬಂದಿದೆ. ಈ ಕಂಪ್ಯೂಟರ್ ವಿಚಾರ ಪ್ರಮುಖ ಪತ್ರಿಕೆಗಳಲ್ಲಿ ಅಂದರೆ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಹಾಗೂ ಬೇರೆ ರಾಷ್ಟ್ರೀಯ ಪ್ರಮುಖ ಪತ್ರಿಕೆಗಳಲ್ಲಿ ಬಂತು. ಇದನ್ನು ನಾವು ಹಾಗೇ ನೋಡುತ್ತಾ ಬಿಟ್ಟರೆ ನಾವು ರಾಜ್ಯಕ್ಕೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಜನರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ತೆರಿಗೆ ಕೊಡತಕ್ಕ ಜನರಿಗೆ ಅನ್ಯಾಯ ಮಾಡಿದ ಹಾಗಾಗುತ್ತದೆ. We are the trustees of the money of the government. ಈ ಕಂಪ್ಯೂಟರ್ ಬಗ್ಗೆ ನನಗೆ ಒಂದು ಪತ್ರ ಬರೆದಿದ್ದು ಅದಕ್ಕೆ ಯಾರೂ ಸಹಿ ಹಾಕಿರುವುದಿಲ್ಲ. ಇದರ ಪ್ರಕಾರ 100 ಕಂಪ್ಯೂಟರ್ ರಿಜೆಕ್ಟ್ ಮಾಡಿದ್ದರು ಅಂತಲೂ, ಅದು ಒಂದು ಎಕ್ಸ್‌ಪರ್ಟ್ ಕಮಿಟಿ ಮುಂದೆ ಇದು ಬಂದಿತ್ತು ಎಂದು ತಿಳಿದುಬಂದಿದೆ. ಅದಕ್ಕೆ ಸರ್ಕಾರದ ಒಬ್ಬ ಕಾರ್ಯದರ್ಶಿ ಸಹಿ ಮಾಡಿದ್ದಾರೆ. The Chairman, the Commissioner and Secretary, Department of Science. ರಿಜೆಕ್ಟ್ ಮಾಡಿದ್ದಾರೆ. ಆದರೂ ಕೂಡ ಕೊಂಡುಕೊಂಡಿದ್ದಾರೆ. ಕೊಂಡುಕೊಂಡಿರತಕ್ಕದ್ದು ಎಷ್ಟು ಜಾಗ್ರತೆಯಾಗಿ ಆಗಿದೆ ಎಂಬುದನ್ನು ತಾವು ಗಮನಿಸಬೇಕು ಉಪಾಧ್ಯಕ್ಷೆಣಿಯವರೇ, ಯಾರೋ ಗೋಕುಲ ಕೃಷ್ಣ ಎನ್ನುವವರು ಒಂದು ಕಾಗದವನ್ನು ತಂದು ನಮ್ಮ 100 ಕಂಪ್ಯೂಟರ್ ತಾವು ಕೊಂಡುಕೊಳ್ಳಬೇಕೆಂದು ಹಣಕಾಸು ಕಾರ್ಯದರ್ಶಿಯವರಿಗೆ 3.30ಕ್ಕೆ ಕಾಗದ ಕೊಡುತ್ತಾರೆ. ಅದನ್ನು 3.40 ಗಂಟೆಗೆ ಮುಖ್ಯಮಂತ್ರಿಗಳಿಗೆ ಕಳುಹಿಸಲಾಗಿದೆ ಎಂದು ಅದರಲ್ಲಿ ಇದೆ. 5 ಗಂಟೆಗೆ ಸರ್ಕಾರಿ ಆಜ್ಞೆ ಆಗುತ್ತದೆ. 5.30 ಗಂಟೆಗೆ ಬಿಲ್ಸ್ ಟ್ರೆಜರಿಗೆ ಹೋಗುತ್ತದೆ. 5.40 ಗಂಟೆಗೆ ಚೆಕ್ ಟ್ರೆಜರಿಯಿಂದ ಬಂದು ಅವರಿಗೆ 1.58 ಕೋಟಿ ರೂಪಾಯಿ ಅಡ್ವಾನ್ಸ್ ಕೊಡುತ್ತಾರೆ. ಇದು ಹೀಗಾದರೆ, ಈ ರೀತಿ ಹಣಕಾಸು ಇಲಾಖೆಯವರು ಈ ರಾಜ್ಯದ ಹಣವನ್ನು ಖರ್ಚು ಮಾಡುವುದನ್ನು ಇಷ್ಟು ಲಘುವಾಗಿ ನೋಡುವುದಾದರೆ, ಮುಖ್ಯಮಂತ್ರಿಗಳು ಇದರ ಬಗ್ಗೆ ತೀವ್ರ ಗಮನಹರಿಸಬೇಕಾಗುತ್ತದೆಂದು ನನಗನ್ನಿಸುತ್ತದೆ. ಇಂತಹ ಅಧಿಕಾರಿಗಳನ್ನು ಅವರು ಹದ್ದುಬಸ್ತಿನಲ್ಲಿ ಇಡಬೇಕು. ಇಲ್ಲದಿದ್ದರೆ ಈ ಸದನಲ್ಲಿ ನಮ್ಮ ಕರ್ತವ್ಯವನ್ನು ನಾವು ಮಾಡಿದ ಹಾಗೆ ಆಗುವುದಿಲ್ಲ. ಇವತ್ತು ಆ 100 ಕಂಪ್ಯೂಟರ್ಸ್ ಬಗ್ಗೆ ಏನು ಪ್ರಸ್ತಾಪ ಆಗುತ್ತಾ ಇದೆ, ಅದರ ನಿಜಾಂಶವನ್ನು ತಾವು ಪರೀಕ್ಷೆ ಮಾಡಿಸಬೇಕು. ಅದನ್ನು ರಿಜೆಕ್ಟ್ ಮಾಡುವಾಗ ಹೇಳುತ್ತಾರೆ; ಈ ಕಂಪೆನಿಯೇ ಯಾರಿಗೂ ಕೊಟ್ಟಿಲ್ಲ ಎಂದೂ, ಹಾಗೆಯೇ ಸರ್ವೀಸ್ ಮಾಡತಕ್ಕ ಜವಾಬ್ದಾರಿ ಅವರಲ್ಲಿ ಇಲ್ಲ ಎನ್ನುವ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಇದು ಕಟ್ಟುಕತೆಯಲ್ಲ ಇದೇ ಸಂದರ್ಭದಲ್ಲಿ ನನಗೆ ಒಂದು ಕಾಗದ ಬಂದಿದೆ. ಇದರ ನಿಜಾಂಶವನ್ನು I cannot vouchsafe this, but ಇದರ ಬಗ್ಗೆ ಕಮಿಟಿ ನೋಡುವಾಗ ಏನು ಗಮನಿಸಿದೆ ಎಂದು ಚೆರಾಕ್ಸ್ ಪ್ರತಿ ಹಾಕಿದ್ದಾರೆ. ಇದನ್ನು ನೋಡುವಾಗ ನನಗಾದರೂ ಸಂಕಟವಾಯಿತು. ಈ ಸಮಯದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡತಕ್ಕದ್ದು ಉತ್ತಮ, ಹಾಗೆ ಂದು ಸಾರ್ವಜನಿಕರ ಹಿತದೃಷ್ಟಿಯಿಂದ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. The Finance Department needs to be trimmed. ಅದನ್ನು ಲಘುವಾಗಿ ಕಾಣತಕ್ಕ ಅಧಿಕಾರಿಗಳ ಕೈಗೆ ಕೊಡತಕ್ಕದ್ದು ಸರಿಯಲ್ಲ. ನಮ್ಮ ರಾಜ್ಯದಲ್ಲಿ ಉತ್ತಮವಾಗಿರತಕ್ಕ ಐ.ಎ.ಎಸ್. ಅಧಿಕಾರಿಗಳು who can manage the Finance Dept. very well, there are many. ಅಂತಹವರ ಕೈಯಲ್ಲಿ ಕೊಟ್ಟು ಅದನ್ನು ಸರಿಯಾಗಿ ವ್ಯವಸ್ಥೆಗೊಳಿಸಬೇಕೇ ವಿನಃ ಹೀಗೆ ಅದನ್ನು ಅಂದಾ ದರ್ಬಾರ್ ಎಂದು ಕರೆಯುವಂಥದಲ್ಲ. ಕಂಪ್ಯೂಟರ್ ಖರೀದಿ ಬಗ್ಗೆ ಇರತಕ್ಕ ಅಪಾದನೆ ನಿಜವಿದ್ದ ಪಕ್ಷದಲ್ಲಿ....

SRI. NAZEER AHMED (Minister for Small Scale Industries) : Madam, I am on a point of order ....

I have great respect to the Hon'ble Member who has Chaired this House some time back. yet I should also have an opportunity to present my opinion. Having chaired the House if he raises with due respect to the Honble Deputy Speaker, I request that I should be given an opportunity to place before the House my views.

MADAM DEPUTY SPEAKER : What is your point of order?

SRI NAZEER AHMED : Madam Deputy Speaker, there are 20 items listed in the Supplementary Estimates which really deserve the attention not only of this House but also the Government. For example, Cauvery dispute and riot, During that riot, the Government has to pay compensation not only to the affected families but also to those where properties and industries were demaged. About Rs. 4.5 crores has to be paid as compensation to them. Do you expect that the Government has to wait for a long time? Is this not a forum to present this supplementary estimates and get them approved? Similarly, there are 20 items listed in the Supplementary Estimates and House has to pass that. The Hon'ble member was talking about computer and some other Hon'ble member were talking about excise. There are so many other forums and under call attention notice those issues can be raised. There are so many other ways under which it can be discussed in this August House and the Hon'ble Chief Minister, time and again, said that this was the precedent and earlier also it was done with the co-operation of the Opposition. So, I request the Hon. Member who has a very big background and who served as the Presiding Officer of this very House, and even served as a Parliament Member once, has to see things on merits and not just to name one or two. If there is something that can be discussed, we can discuss later on also and he will get full opportunity.

MADAM DEPUTY SPEAKER : There is no point of order.

SRI. K.H. RANNGANATH : Thank you madam. ನಾನು ಕಾಲವನ್ನು ಹೆಚ್ಚು ತೆಗೆದುಕೊಳ್ಳುವುದಿಲ್ಲ. ತಮ್ಮ ಅಪ್ಪಣೆ ಪಡೆದು ಮಾತನಾಡುತ್ತಿದ್ದೇನೆ. ನಾನು ಹೇಳುತ್ತಾ ಇದ್ದೆ, ಏನೆಂದರೆ ಅಧಿಕಾರಿಗಳು ಇದನ್ನು ಈ ತರಹ ಕಾಣುತ್ತಿದ್ದಾರೆ. ಇದನ್ನು ಗಮನಿಸಬೇಕು ಎನ್ನುವ ಮಾತನ್ನು ಹೇಳುತ್ತಾ ಇದ್ದೆ. ಇಲ್ಲಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದು ಡಿಸ್‌ಕಷನ್‌ಗೆ ಇರತಕ್ಕದ್ದು. ಇದನ್ನೆಲ್ಲಾ ನಾವು ನೋಡಿ ಒಪ್ಪಿ ನಾವು ಪಾಸ್ ಮಾಡತಕ್ಕದ್ದು ಇದೆ. ದೃಷ್ಟಿಯಿಂದ ಹೇಳುತ್ತಿದ್ದೆ. ರೆಕ್ಟಿಫೈಡ್ ಸ್ಪಿರಿಟ್‌ನ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ. ಅದನ್ನು ಎಷ್ಟು ಜಾಸ್ತಿ ಮಾಡಿದ್ದಾರೆ. ಯಾವ ವರ್ಷದ್ದು; ಅದನ್ನು ರೆಟ್ರಾಸ್ಪೆಕ್ಟೀವ್ ಕೊಟ್ಟಿದ್ದರಿಂದ ನ್ಯೂ–ಸರ್ವೀಸ್‌ನಲ್ಲಿ ಹೇಗೆ ಬಂತು ಇದನ್ನು ಸ್ವಲ್ಪ ವಿವರಿಸಿದರೆ ತುಂಬಾ ಒಳ್ಳೆಯದೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮನ್ಯ ಉಪಸಭಾಧ್ಯಕ್ಷಣಿಯರೇ, ಪೂರಕ ಅಂದಾಜುಗಳು ಇಲ್ಲಿ ನೇರವಾಗಿ ಹಲವಾರು ವಿಚಾರಗಳಿಗೆ ಸಂಬಂಧಪಡತಕ್ಕ ವಿಚಾರಗಳಾದರೂ ಕೂಡ ಕಾಲದ ಅಭಾವವಿರಬಹುದೆಂದು ನನ್ನ ಅನಿಸಿಕೆ. ಕೆಲವನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡತಕ್ಕ ಒಂದು ಪ್ರಯತ್ನ ಮಾಡಿದ್ದಾರೆ. ಪ್ರಾಮುಖ್ಯವಾಗಿ ಪ್ರಸ್ತಾಪ ಮಾಡಿರತಕ್ಕದ್ದು ಎರಡು. ಆದರೂ ಕೂಡ

ಅದರಲ್ಲಿ ಅನೇಕ ವಿಚಾರಗಳಿವೆ. ಒಂದು ವಿಚಾರವನ್ನು ನೀವು ಗಮನಿಸಬೇಕು. ಎಕ್ಸೆಪ್ಟ್ ಇಯರ್ ಯಾವಾಗ ಶುರುವಾಗುತ್ತದೆ ಯಾವಗ ಕ್ಲೋಸ್ ಆಗುತ್ತದೆ ಎನ್ನುವುದನ್ನು ಗಮನಿಸಿದ್ದೀರಿ ಎಂದು ನಾನು ಭಾವಿಸಿದ್ದೇನೆ. ಎಕ್ಸೆಸ್ ಇಯರ್ ಯಾವಾಗಲೂ ಜುಲೈ 1ನೇ ತಾರೀಖು ಶುರುವಾಗುತ್ತದೆ. ನ್ಯೂಸರ್ವೀಸ್ ಬಗ್ಗೆ ವಿಚಾರ ಮಾಡತಕ್ಕ ಸಂದರ್ಭ ಬಂದಾಗ ನಾವು ಇದನ್ನು ಗಮನದಲ್ಲಿಟ್ಟುಕೊಂಡು ನಾವು ಮುಂದಕ್ಕೆ ಹೋಗಬೇಕಾಗುತ್ತದೆ. ರೆಕ್ಟಿಫೈಡ್ ಸ್ಪಿರಿಟ್‌ನ ರೇಟನ್ನು ಜಾಸ್ತಿ ಮಾಡುವುದಕ್ಕೆ ಏನು ಕಾರಣ ಎನ್ನುವುದು ತಮಗೆಲ್ಲಾ ಗೊತ್ತಿದೆ. ನಿಜ. ರೆಕ್ಟಿಫೈಡ್ ಸ್ಪಿರಿಟ್ ಅನ್ನು ನಾವೇ ಉತ್ಪಾದನೆ ಮಾಡುವುದಾಗಲೀ, ಮತ್ತೊಂದು ಮಾಡತಕ್ಕಂಥ ಪ್ರಶ್ನೆ ಕೂಡ, ಅದನ್ನು ತೆಗೆದುಕೊಳ್ಳತಕ್ಕಂಥದ್ದು, ಅದನ್ನು ಸಪ್ಲೈ ಮಾಡ ತಕ್ಕಂಥಾದ್ದು ಎಲ್ಲ ವಿಚಾರ ಕೂಡ ಇದೆ. ಆದ್ದರಿಂದ ಆ ವಿವರಗಳನ್ನು ಮಾನ್ಯ ಸದಸ್ಯರು ಏನು ಕೇಳಿದ್ದಾರೆ, ಅದನ್ನು ಒದಗಿಸಿಕೊಡೋಣ. ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಎಕ್ಸೆಸ್ ಇಯರ್ ಯಾವಾಗ ಸ್ಟಾರ್ಟ್ ಆಗುತ್ತದೆ, ಯಾವಾಗ ಮುಕ್ತಾಯವಾಗುತ್ತದೆ ಎಂಬುದು ಮಾತ್ರ ಬೇರೆ ಫೈನಾನ್ಸಿಯಲ್ ಇಯರ್ ಅಂತ ನಾವು ಏನು ಮಾತನಾಡುತ್ತೇವೆ. ಅದಕ್ಕೂ ಇದಕ್ಕೂ ಬಹಳ ವ್ಯತ್ಯಾಸ ಇರುತ್ತದೆ. ಬಹಳ ವರ್ಷಗಳಿಂದ ಇದನ್ನು ನಡೆಸಿಕೊಂಡು ಬಂದಿದ್ದೇವೆ. ಜುಲೈ ಫರ್ಸ್ಟ್‌ನಿಂದ ಎಕ್ಸೆಸ್ ಇಯರ್ ಸ್ಟಾರ್ಟ್ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಅದು ಬಿಟ್ಟರೆ ಇದರಲ್ಲಿ ಬೇರೆ ಯಾವ ಹೊಸ ವಿಚಾರ ಏನೂ ಇಲ್ಲ. As far as purchase of computer is concerned, ಆ ವಿಚಾರದ ಬಗ್ಗೆ ತಮ್ಮ ಗಮನಕ್ಕೆ ತರತಕ್ಕದ್ದು ಇಷ್ಟೇ; ಮಾರ್ಚ್ ಎಂಡಿಂಗ್ ಇದ್ದಾಗ, ಯಾವಾಗಲೂ ತಮಗೆ ಗೊತ್ತಿದೆ, ಮತ್ತೆ ಟ್ಯಾಕ್ಸ್ ಬೀಳುತಕ್ಕಂಥ ಹೆದರಿಕೆ ಕೂಡ ಸರ್ಕಾರಕ್ಕೆ ಇದೆ ನಿಜ, We have taken a decision as a policy matter to introduce there computers in alomost all the departments ಇದು ಜನರಲ್ ಆಗಿ ಇತ್ತೀಚೆನ ಒಂದು ಚಿಂತನೆಯಾಗಿ ಬರುತ್ತಿದೆ. ಅನೇಕ ರಾಷ್ಟ್ರಗಳಲ್ಲಿ ಇದು ಇದೆ. ನಾವು ಕೂಡ ಮಾಡಬೇಕೆಂದು ಇದ್ದೇನೆ. ಈಗ ಉದಾಹರಣೆಗೆ ವಿಶ್ವ ಕಾರ್ಯಕ್ರಮ ನಾವು ಅದಕ್ಕೆ ಕಂಪ್ಯೂಟರ್ ಇಂಟ್ರೋಡ್ಯೂಸ್ ಮಾಡಬೇಕೆಂದು ಮಾಡಿದವು. For example Japan is an highly advanced country as far as industrial growth is concerned; ನಾವು ಅದನ್ನು ನೋಡಿಕೊಂಡು ಇಲ್ಲಿ ಮಾಡಬೇಕೆಂದು ವಿಚಾರ ಮಾಡಿ ಈಗಾಗಲೇ ಇದರ ಬಗ್ಗೆ ಚರ್ಚೆ ಮಾಡಿ ಕೆಲವು ತೀರ್ಮಾನ ಕೂಡ ನಾವು ಮಾಡಿದ್ದೇವೆ. ಅದು ಅಷ್ಟೇ ಅಲ್ಲ. ಅನೇಕ ಇಲಾಖೆಗಳಲ್ಲಿ ಸೆಕ್ರೆಟರಿಯೇಟ್ ಬಿಲ್ಡಿಂಗ್‌ನಲ್ಲಿ, ಡಿಪಾರ್ಟ್‌ಮೆಂಟಲ್ ಏರಿಯಾಸ್‌ನಲ್ಲಿ ಮತ್ತು ಮಿನಿಸ್ಟ್ರಿಯಲ್ ಆಫೀಸ್‌ಗಳಲ್ಲಿ ಕಂಪ್ಯೂಟರ್‌ಗಳನ್ನು ಇಂಟ್ರೋಡ್ಯೂಸ್ ಮಾಡತಕ್ಕಂಥ ವಿಚಾರ ಇದ. ಇನ್ನೊಂದು ವಿಚಾರ ತಾವೇನು ಹೇಳಿದಿರಿ, ಮೂರು ಗಂಟೆಗೆ ಇದಾಗಿದೆ, ನಾಲ್ಕು ಗಂಟೆಗೆ ಇದಾಗಿದೆ, ಆಮೇಲೆ ಇಷ್ಟು ಗಂಟೆಗೆ ಚೆಕ್ ಇಷ್ಟೂ ಆಗಿದೆ ಅಂತ. ಮಾರ್ಚ್ ಎಂಡ್‌ನಲ್ಲಿ ಯಾವಾಗಲೂ ಹಾಗೇ ಇರುವುದು. ಅದು ಆಗುತ್ತದೆ. ಅಲ್ಲಿ ಏನೋ ನಡೆದುಬಿಟ್ಟಿದೆ ಅಂತ ಅಲ್ಲ. ನಾನು ಕೆಲವು ಪತ್ರಿಕೆಗಳಲ್ಲಿ ನೋಡಿದೆ, ಓಹೋ ಆರ್ಜಿ ತಡವಾಗಿ ಕೊಟ್ಟಿದ್ದಾರೆ, ಆರ್ಜಿ ಕೊಟ್ಟ ಎರಡು ದಿವಸದಲ್ಲಾಗಿದೆ ಅಂತ ಇದೆ. ವಿಷಯ ಅವೆಲ್ಲಾ, ವಿವರಗಳು ನಿಮಗೆ ಏನು ಬೇಕು, ಅದನ್ನು ಸಭೆಯ ಮುಂದೆ ಇಡುವುದಕ್ಕೆ ನಾವು ತಯಾರಿದ್ದೇವೆ. ಇದರಲ್ಲಿ ಯಾವುದೇ ಒಂದು ವಿಚಾರವನ್ನು ಕೂಡ ಮುಚ್ಚಿಡುವ ಪ್ರಶ್ನೆ ಇಲ್ಲ. ನಾಳೆ ಮಾರ್ಚ್ ಮುಗಿದ ತಕ್ಷಣ ಹೆಚ್ಚಿನ ತೆರಿಗೆ ಬೀಳುತ್ತದೆ ಎನ್ನತಕ್ಕಂಥ ಹೆದರಿಕೆ ಕೂಡ ನಮ್ಮ ಮನಸ್ಸಿನಲ್ಲಿ ಇತ್ತು. ಅದಕ್ಕೋಸ್ಕರ ನಾವು ಪರ್ಚೇಸ್ ಮಾಡಬೇಕೆಂದು ತಾಂತ್ರಿಕ ಅಭಿಪ್ರಾಯ ಯಾರ್ಯಾರಿಂದ ಪಡೆಯಬೇಕು, ಅದನ್ನು ಪಡೆದುಕೊಂಡೇ ಇದನ್ನು ನಾವು ಮಾಡಿದ್ದೇವೆ. ನಿಮಗೆ ಇದರ ಬಗ್ಗೆ ಅನುಮಾನ ಬೇಡ. ಆ ಬಗ್ಗೆ ಸಂಪೂರ್ಣವಾದ ವಿವರಗಳನ್ನು ನಾವು ಕೊಡುತ್ತೇವೆ. ಆದರೆ ಈಗ ಒಂದೊಂದಕ್ಕೂ ವಿವರ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಗಳನ್ನು ಆ ಸದನದಲ್ಲಿ ಕಳಿಸಿದ್ದಾರೆ. ಇಲ್ಲಿ ಕೂಡ ಬಂದಿದೆ ಅಂತ ನಾನು ಕೇಳಿದ್ದೇನೆ. I don't know how far that is true,ಅದಕ್ಕೋಸ್ಕರ ಹಾಗೆ ಬಂದಾಗ

ನಾವು ವಿವರಗಳನ್ನು ಸದನದ ಮುಂದೆ ಇಡುವುದಕ್ಕೆ ತಯಾರಿದ್ದೇವೆ. ಇದರ ಬಗ್ಗೆ ತಮಗೆ ಅನುಮಾನ ಸ್ವಲ್ಪ ಕೂಡ ಬೇಕಾಗಿಲ್ಲ.

Sri K.H. RANGANATH : The Finance Commissioner should have applied his mind ಇದನ್ನು ನಾವು ಹೇಳುತ್ತಿದ್ದೇನೆ. ಏಕೆಂದರೆ 31ನೇ ತಾರೀಖು ಮಧ್ಯಾಹ್ನ ಮೂರು ಗಂಟೆಗೆ ಖರೀದಿ ಮಾಡತಕ್ಕಂಥ ತೀರ್ಮಾನ ತೆಗೆದುಕೊಂಡು ಸಾಯಂಕಾಲ 5.40ರೊಳಗೆ ಒಂದು ಕೋಟಿ 58 ಲಕ್ಷ ರೂಪಾಯಿಗಳಿಗೆ ಚೆಕ್ ಕೊಡುತ್ತೀರಿ. ನಾನು ಕಂಪ್ಯೂಟರ್ ತೆಗೆದುಕೊಳ್ಳಬಾರದು ಅಂತ ಹೇಳಿಲ್ಲ ಒಳ್ಳೆಯ ಕಂಪ್ಯೂಟರ್ ತೆಗೆದುಕೊಳ್ಳಬೇಕು. ರೆಪ್ಯೂಎಡ್ ಕಂಪನಿಯಿಂದ ತೆಗೆದುಕೊಳ್ಳಬೇಕು. ಪ್ರೊಸಿಜರ್ ಏನಿದೆ, ಅದನ್ನು ಫಾಲೋ ಮಾಡಿ ತೆಗೆಕೊಳ್ಳಬೇಕು ಅಂತ ನಾನು ಹೇಳಿದೆ. That is what I meant...

Sri S. Bangarappa : There I agree, ಪ್ರೊಸಿಜರ್ ಫಾಲೋ ಮಾಡಬೇಕು. ಒಳ್ಳೆಯ ಕಂಪನಿಯಿಂದ ತೆಗೆದುಕೊಳ್ಳಬೇಕು. ನಾವೂ ಅದನ್ನೇ ಮಾಡಿರುವುದು. ನನ್ನ ಸ್ಪಷ್ಟಾದ ಅಭಿಪ್ರಾಯ ಹೇಳುತ್ತಿದ್ದೇನೆ. ಮಾರ್ಚ್ ತಿಂಗಳ ಕೊನೆಯಲ್ಲಿ ಯಾವಾಗಲೂ ಆಗುವುದು ಹಾಗೇನೇ. ಏಕೆಂದರೆ ನಾವು ಆ ರೀತಿ ಪರ್ಚೇಸ್ ಮಾಡದೇ ಇದ್ದರೆ ಅದು ಮುಂದಿನ ವರ್ಷಕ್ಕೆ ಹೋಗುತ್ತದೆ. ಆಮೇಲೆ ನಾಳೆ ಟ್ಯಾಕ್ಸ್ ಬಿದ್ದರೆ ಹೆಚ್ಚಿಗೆ ಹಣ ನಮ್ಮ ಫಂಡ್‌ನಿಂದ ಕೊಟ್ಟು ಕೊಂಡುಕೊಳ್ಳಬೇಕಾಗುತ್ತದೆ ಅದನ್ನು ತಪ್ಪಿಸುವ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ ಎನ್ನುವುದಕ್ಕೆ ಕಾರಣಗಳೂ ಕೂಡ ಇವೆ. ಅವೆಲ್ಲವನ್ನು ಕೂಡ ಸದನದ ಮುಂದೆ ಇಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಆ ಸಂದರ್ಭ ಬಂದಾಗ ಹೇಳೋಣ. ಇದನ್ನು ಬಿಟ್ಟರೆ ಬೇರೆ ಯಾವ ವಿಚಾರ ಕೂಡ ಬಂದಿಲ್ಲ. ಆದ್ದರಿಂದ ಇದನ್ನು ಒಪ್ಪಿಗಗಾಗಿ ತಾವು ಮಂಡಿಸಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷೆಯವರು : ನಾನು ಪ್ರಸ್ತಾಪವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ :

1993ನೇ ಮಾರ್ಚ್ 31ರ ಅಂತ್ಯದೊಳಗೆ ದೊರಕಲಿರುವ ಪೂರಕ ಅಂದಾಜುಗಳ ಮೊದಲನೇ ಕಂತು ಬೇಡಿಕೆ ಸಂಖ್ಯೆ 5, 7, 10, 11, 21, 23, 25, 27, 28, 29, 34, 40, 41, 42, 45, 53, 57, 58, ಮತ್ತು 60ಕ್ಕೆ ಸರ್ಕಾರದವರು ಸದರಿ ವೆಚ್ಚವನ್ನು ಸಂದಾಯ ಮಾಡುವಂತೆ ಆಗಲು ಪೂರಕ ಅಂದಾಜುಗಳ ಪಟ್ಟಿಯಲ್ಲಿ ಸೂಚಿಸಿದ ಮೊಬಲಿಗೆ ಮೀರದಂತೆ ಇರುವ ಮೊತ್ತವನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕು.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು ಮತ್ತು ಅನುಪೂರಕ ಬೇಡಿಕೆಗಳಿಗೆ ಮಂಜೂರಾತಿ ನೀಡಲಾಯಿತು.

1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ (3) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷೆಯವರೇ, 1992ನೇ ಸಾಲಿನ ಕರ್ನಾಟಕದ ಧನ ವಿನಿಯೋಗ ಸಂಖ್ಯೆ (3) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷೆಯವರು : ಪ್ರಸ್ತಾಪ ಏನೆಂದರೆ "1992ನೇ ಇಸವಿಯನ್ನು ಕರ್ನಾಟಕ ಧನ ವಿನಿಯೋಗ ಸಂಖ್ಯೆ (3) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷೆಯವರೇ, 1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ (3) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷೆಯವರು : ವಿಧೇಯಕವನ್ನು ಮಂಡಿಸಲಾಯಿತು (xx x) ಅನುಬಂಧ – III